


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 | Issue-05 | May 2023 | ₹ 10/-


## ಹೃತ್ಪೂರ್ವಕ ಅಭಿನಂದನೆಗಳು





**ಶ್ರೀ ಸಿದ್ಧರಾಮಯ್ಯ**

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ





**ಶ್ರೀ ಡಿ.ಕೆ. ಶಿವಕುಮಾರ್**

ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ
ಮತ್ತು ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ಶುಭಾಶಯಗಳನ್ನು ಕೋರುತ್ತೇವೆ.

# 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮತಗಟ್ಟೆಗಳಲ್ಲಿ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸೇವೆ ಮಾಡುತ್ತಿರುವುದು


ಬೀದರ್


ಬೆಳಗಾವಿ


ಬೆಂಗಳೂರು ದಕ್ಷಿಣ


ಹಾವೇರಿ


ಕೋಲಾರ


ಕೊಡಗು


ಮಧುಗಿರಿ


ಮೈಸೂರು


ರಾಯಚೂರು


ರಾಮನಗರ


ತುಮಕೂರು


ಉಡುಪಿ

ಪೋಷಕರು
ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು
ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು
ಕೊಂಡಜ್ಜಿ ಬ. ಷಣ್ಮುಖಪ್ಪ

ಸಂಪಾದಕರು
ಕೆ. ಗಂಗಪ್ಪಗೌಡ

ಸಹಸಂಪಾದಕರು
ಎನ್. ಶ್ರೀನಿವಾಸನ್

ಸಂಚಾಲಕರು
ಬಿ.ಎಸ್. ರವೀಂದ್ರ

ಸದಸ್ಯರು
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 05 May 2023

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಭಕ್ತಿಮಾರ್ಗ ...05
ರಾಜ್ಯ ಮಟ್ಟದ ಮುಕ್ತದಳದ ನಾಯಕರುಗಳ/ನಾಯಕಿಯರ ಸಮಾವೇಶ ...06
ಜೂನ್ 2023ರ ಕಾರ್ಯಕ್ರಮಗಳು ...09
ವಿಶ್ವ ಪರಿಸರ ದಿನಾಚರಣೆ-2023: ಪರಸರ ವ್ಯವಸ್ಥೆಯ ಪುನಃಸ್ಥಾಪನೆ ...11
ಜಿಲ್ಲಾ ವಾರ್ತೆಗಳು ...13
ಹಾಲು ಅಮೃತ ...25
ಅಂತರ್ ರಾಷ್ಟ್ರೀಯ ಸ್ಕೌಟ್ಸ್-ಗೈಡ್ಸ್ ಸಾಂಸ್ಕೃತಿಕ ಜಾಂಬೂರಿ: ಯಜ್ಞ-ಮಹಾಯಜ್ಞ ...26



# ರಾಜ್ಯ ಮುಖ್ಯ ಆಯುಕ್ತರ ನುಡಿ



**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಕರ್ನಾಟಕದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದ 24ನೇ ಮುಖ್ಯಮಂತ್ರಿಗಳಾಗಿ ಶ್ರೀ ಸಿದ್ದರಾಮಯ್ಯ ರವರು ಮತ್ತು ಉಪ ಮುಖ್ಯಮಂತ್ರಿಗಳಾಗಿ ಶ್ರೀ ಡಿ.ಕೆ. ಶಿವಕುಮಾರ್ ರವರು ಈ ಸರ್ಕಾರದ ನೇತೃತ್ವ ವಹಿಸಿದ್ದಾರೆ. ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯರವರು ನಮ್ಮ ರಾಜ್ಯ ಸಂಸ್ಥೆಗೆ ಮತ್ತು ರಾಜ್ಯದಲ್ಲಿ ಚಳುವಳಿಯ ಬೆಳವಣಿಗೆಗೆ ನೀಡಿದ್ದ ಅಭೂತಪೂರ್ವ ಸಹಕಾರವನ್ನು ಸ್ಮರಿಸುತ್ತಾ, ಮುಂದಿನ ದಿನಗಳಲ್ಲೂ ಅದೇ ರೀತಿಯ ಸಹಕಾರ ಲಭಿಸುವ ವಿಶ್ವಾಸದೊಂದಿಗೆ, ನೂತನ ಮುಖ್ಯಮಂತ್ರಿಗಳನ್ನು, ಉಪ ಮುಖ್ಯಮಂತ್ರಿಗಳನ್ನು ಹಾಗೂ ಸಂಪುಟದ ಎಲ್ಲ ಸಚಿವರುಗಳನ್ನು ವೈಯಕ್ತಿಕವಾಗಿ ಹಾಗೂ ಭಾರತ್ ಸ್ಕೌಟ್ಸ್ & ಗೈಡ್ಸ್, ರಾಜ್ಯ ಸಂಸ್ಥೆಯ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಸರ್ಕಾರದಿಂದ ನಾಡಿನ ಜನರ ನಿರೀಕ್ಷೆಗಳೆಲ್ಲವೂ ಸಾಕಾರಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ರಾಜ್ಯ ವಿಧಾನಸಭೆಯ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಶ್ರೀ ಯು.ಟಿ. ಖಾದರ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ತಮ್ಮ ಶಾಲಾ ದಿನಗಳಲ್ಲಿ "ರಾಷ್ಟ್ರಪತಿ ಸ್ಕೌಟ್"ಆಗಿದ್ದ ಶ್ರೀ ಖಾದರ್ ರವರು ಈವರೆಗೂ ಚಳುವಳಿಯಲ್ಲಿ ಸಕ್ರಿಯರಾಗಿದ್ದಾರೆ. ಈ ಗೌರವಾನ್ವಿತ ಸ್ಥಾನಕ್ಕೆ ಅವರ ಆಯ್ಕೆ ನಮ್ಮ ಸಂಸ್ಥೆಗೂ ಹೆಮ್ಮೆ ತಂದಿದೆ. ಇವರಿಗಿರುವ ಆಡಳಿತದ ಅನುಭವ, ಎಲ್ಲರನ್ನೂ ಸರಿದೂಗಿಸಿಕೊಂಡು ಹೋಗುವ ಗುಣ ಮತ್ತು ಜಾತ್ಯಾತೀತ ಮನೋಭಾವದಿಂದ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಅವರು ಯಶಸ್ವಿಯಾಗುವ ಭರವಸೆ ಇದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ಅವರಿಗೆ ಎಲ್ಲಾ ರೀತಿಯ ಶಕ್ತಿ ಮತ್ತು ಯಶಸ್ಸನ್ನು ನಮ್ಮ ಸಂಸ್ಥೆ ಹಾರೈಸುತ್ತದೆ, ಅವರಿಗೆ ಶುಭವಾಗಲಿ.

ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಸವರಾಜ್ ಬೊಮ್ಮಾಯಿ ಮತ್ತು ಅವರ ಎಲ್ಲ ಸಚಿವ ಸಂಪುಟದ ಸದಸ್ಯರುಗಳು ಮತ್ತು ಅಧಿಕಾರಿಗಳಿಂದಲೂ ನಮ್ಮ ಸಂಸ್ಥೆಗೆ ಮತ್ತು ಚಳುವಳಿಗೆ ಸಹಕಾರ, ಪ್ರೋತ್ಸಾಹ ಸಿಕ್ಕಿರುವುದನ್ನು ನೆನೆಸಿಕೊಳ್ಳುತ್ತಾ, ಅವರೆಲ್ಲರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ನಮ್ಮ ಸಂಸ್ಥೆಯಿಂದ ರಾಜ್ಯಾದ್ಯಂತ ಆಯೋಜಿಸಿದ್ದ ಬೇಸಿಗೆ ಶಿಬಿರಗಳು ನಿರೀಕ್ಷೆಗಿಂತ ಯಶಸ್ವಿಯಾಗಿ ನಡೆದಿರುವುದು ನನಗೆ ಸಂತೋಷ ತಂದಿದೆ. ಇದಕ್ಕೆ ಅಭೂತಪೂರ್ವ ಸಹಕಾರ ನೀಡಿದ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿದೆ. ಈ ಯಶಸ್ಸಿಗೆ ಕಾರಣರಾಗಿರುವ ಎಲ್ಲಾ ಸ್ಥಳೀಯ ಹಾಗು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳಿಗೆ, ಶಿಕ್ಷಕರುಗಳಿಗೆ ಹೃತ್ಪೂರ್ವಕವಾದ ಅಭಿನಂದನೆಗಳು.

ಮೇ 20 ರಂದು ಕೇಂದ್ರ ಕಛೇರಿಯಲ್ಲಿ ರಾಜ್ಯದ ಎಲ್ಲ ಮುಕ್ತ ದಳಗಳ ನಾಯಕ/ನಾಯಕಿಯರುಗಳ ಸಮಾವೇಶವನ್ನು ಕರೆದು, ಸಮಾಲೋಚನೆ ಮಾಡಲಾಯಿತು. ರಾಜ್ಯಾದ್ಯಂತ ಈ ಸಮಾವೇಶಕ್ಕೆ ಬಂದು ಭಾಗವಹಿಸಿದ್ದ 106 ಮುಕ್ತ ದಳನಾಯಕ/ಕಿಯರುಗಳು ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ತೊಡಗಿದ್ದಲ್ಲದೆ, ಕಾರ್ಯಕ್ರಮ, ಚಟುವಟಿಕೆ ಮತ್ತು ರಾಜ್ಯ ಸಂಸ್ಥೆಯಿಂದ ನಿರೀಕ್ಷಿಸಿರುವ ಸಹಕಾರಗಳ ಬಗ್ಗೆ ಸಲಹೆಗಳನ್ನು ನೀಡಿದ್ದಾರೆ. ರಾಜ್ಯ ಸಂಸ್ಥೆಯಿಂದ ಕೆಲವು ವಿಚಾರಗಳಲ್ಲಿ ಸಹಕಾರವನ್ನು ಬಯಸಿದ್ದಾರೆ. ಎಲ್ಲ ಸಲಹೆಗಳನ್ನು ಗೌರವಿಸಿ ಮುಂದಿನ ದಿನಗಳಲ್ಲಿ ಮುಕ್ತ ದಳಗಳ ಸದೃಢತೆ ಮತ್ತು ಇನ್ನೂ ಹೆಚ್ಚಿನ ಸಂಖ್ಯೆಯ ಮುಕ್ತ ದಳಗಳನ್ನು ಪ್ರಾರಂಭಿಸುವ ಬಗ್ಗೆ ನಾವೆಲ್ಲರೂ ಆಸಕ್ತಿ ವಹಿಸಬೇಕೆಂದು ಕೋರುತ್ತೇನೆ..

2022-23ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗಳ ಫಲಿತಾಂಶಗಳಲ್ಲಿ ಸ್ಕೌಟ್ ಮತ್ತು ಗೈಡ್ಸ್‌ಗಳು ಗಣನೀಯ ಪ್ರಮಾಣದಲ್ಲಿ ತೇರ್ಗಡೆ ಹೊಂದಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಕಲಿಕೆಯಲ್ಲಿ ಉಂಟಾದ ಏರುಪೇರುಗಳನ್ನು, ಗೊಂದಲಗಳನ್ನು ಮತ್ತು ಸವಾಲುಗಳನ್ನು ಎದುರಿಸಿಯೂ ಉತ್ತಮ ಸಾಧನೆ ಮಾಡಿರುವ ಮಕ್ಕಳು ಮತ್ತು ಅವರನ್ನು ಪರೀಕ್ಷೆಗೆ ಸಜ್ಜುಗೊಳಿಸಿರುವ ಶಿಕ್ಷಕರು ಹಾಗೂ ಪೋಷಕರುಗಳು ಅಭಿನಂದನಾರ್ಹರು. ಅವರೆಲ್ಲರಿಗೂ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.

ಸ್ಕೌಟ್ಸ್ ಮತ್ತು ಗೈಡ್ಸ್ ಹಿತೈಷಿಗಳಾಗಿದ್ದ ಖ್ಯಾತ ನೇತ್ರ ತಜ್ಞ, ಡಾ. ಭುಜಂಗ ಶೆಟ್ಟಿರವರು ನಮ್ಮನ್ನಗಲಿದ್ದಾರೆ. ಪ್ರಸಿದ್ದ ನಾರಾಯಣ ನೇತ್ರಾಲಯದ ಮುಖ್ಯಸ್ಥರಾಗಿದ್ದುಕೊಂಡು ಡಾ. ರಾಜ್‌ಕುಮಾರ್ ನೇತ್ರದಾನ ಸಂಸ್ಥೆ ಸ್ಥಾಪಿಸಿ, ಬಹುದೊಡ್ಡ ಸಮಾಜಮುಖಿ ಕಾರ್ಯದಲ್ಲಿ ಅವರು ತೊಡಗಿದ್ದರು. ಲಕ್ಷಾಂತರ ಜನರಿಗೆ ದೃಷ್ಟಿ ಬರುವಂತೆ ಮಾಡಿ ಅವರ ಕುಟುಂಬಕ್ಕೆ ಬೆಳಕಾಗಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಕುಟುಂಬದವರಿಗೆ, ಎಲ್ಲ ಹಿತೈಷಿಗಳಿಗೆ ಮತ್ತು ನಾರಾಯಣ ನೇತ್ರಾಲಯದ ಎಲ್ಲ ಸಿಬ್ಬಂದಿಗಳಿಗೆ ಇವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

"ಜಗತ್ತಿನಲ್ಲಿ ದೇವರು ಹಸಿದವರಿಗೆ ರೊಟ್ಟಿಯ ರೂಪದಲ್ಲಿ ಕಾಣಸಿಗುತ್ತಾನೆಯೇ ಹೊರತು, ಬೇರಾವುದೇ ರೂಪದಲ್ಲೂ ಕಾಣಿಸಲಾರ"

– ಮಹಾತ್ಮ ಗಾಂಧಿ

ಆಹಾರವನ್ನು ದುರ್ವ್ಯಯ ಮಾಡಬೇಡಿ

# ಭಕ್ತಿಮಾರ್ಗ




**ನಾಡೋಜ ಡಾ. ಗೊ.ರು. ಚನ್ನಬಸಪ್ಪ**

ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ

ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ


ಮಾನವನಲ್ಲಿ ಕಂಡು ಬರುವ ಸಂವೇದನೆಗಳಲ್ಲಿ ಒಂದು ಭಕ್ತಿ. ಈ ಭಕ್ತಿಯನ್ನು ಕೇವಲ ದೈವಶ್ರದ್ಧೆಗಷ್ಟೇ ಸೀಮಿತಗೊಳಿಸಿರುವ ಕಾರಣ, ಮುಕ್ತಿಯ ಕೇವಲ ಮಾರ್ಗ ಎಂದು ಅಲೌಕಿಕಗೊಳಿಸಿರುವ ಕಾರಣ, ಅದು ಇಂದಿನ ವ್ಯಾವಹಾರಿಕ ಜಗತ್ತಿನ ಪ್ರದರ್ಶನ-ಪ್ರಚಾರಗಳ ಅಬ್ಬರದಲ್ಲಿ ಒಂದು ಅಸಂಗತ ವಿಚಾರವೆನಿಸಿದೆ; ಸಲ್ಲದ ನಾಣ್ಯವೆನಿಸಿದೆ.

'ಆದರೆ ಭಕ್ತಿಯ ಅರ್ಥ ಮತ್ತು ವ್ಯಾಪ್ತಿ ಹೀಗೆ ಯಾವುದೇ ದೇವರು, ಧರ್ಮ ಅಥವಾ ಅಧ್ಯಾತ್ಮಗಳಿಗೇ ಸೀಮಿತವಾದುದಲ್ಲ. ಭಕ್ತಿ ಎಂದರೆ ಕಣ್ಣುಮುಚ್ಚಿ ಕೈಮುಗಿದು ಧ್ಯಾನ ಮಾಡುವುದಲ್ಲ, ಮಡಿಯುಟ್ಟು ಗುಡಿಗೆ, ಹೋಗಿ, ಅಲ್ಲಿರುವ ಮೂರ್ತಿಗೆ ನೀರೆರೆದು, ಹೂ-ಪತ್ರೆಗಳಿಂದ ಪೂಜಿಸಿ, ಹಣ್ಣು-ಕಾಯಿ ನೈವೇದ್ಯ ಮಾಡುವುದಲ್ಲ; ಅನಿಷ್ಟ ನಿವಾರಣೆಗೆಂದೋ ತೀರ್ಥಯಾತ್ರೆಗೆ ಹೋಗುವುದಲ್ಲ; ಒಂಟಿಯಾಗಿಯೋ, ಒಟ್ಟಾಗಿಯೇ ಮಾಡುವ ಭಜನೆಯೂ ಅಲ್ಲ.'

ಇವೆಲ್ಲ ಬಹಿರಂಗದ ಆಚರಣೆಗಳು; ಸಂಪ್ರದಾಯದ ಶ್ರದ್ಧೆಗಳು; ಕೆಲವು ಸಂದರ್ಭಗಳಲ್ಲಂತೂ ಯುಕ್ತಿಗಳು. ವಾಸ್ತವವಾಗಿ ಭಕ್ತಿ ಎನ್ನುವುದು ಬಹಿರಂಗದ ಆಚರಣೆಯಲ್ಲ; ಅದು ಅಂತರಂಗದ ಶಿಸ್ತು. ಭಕ್ತನ ವಿಶೇಷವೆಂದರೆ ಸಕಲ ಜೀವರಾಶಿಗಳನ್ನೂ ತನ್ನಂತೆ ಭಾವಿಸುವುದು; ಮಾಡುವ ಕರ್ತವ್ಯವನ್ನು ಶ್ರದ್ಧಾ ನಿಷ್ಠೆಗಳಿಂದ ಮಾಡುವುದು; ಅನ್ಯಾಯ ಅಸಂಗತಗಳ ವಿರುದ್ಧ ನಿರ್ದಾಕ್ಷಿಣ್ಯದಿಂದ ನಿಲ್ಲುವುದು. ಭಕ್ತನ ಆಸ್ತಿ-ಅವನ ಆತ್ಮಶಕ್ತಿ; ಅವನು ನಡೆಯುವ ಹಾದಿ-ಸಾತ್ವಿಕ ಹಾದಿ; ಅವನ ಗುರಿಯೆಲ್ಲೆ ಲೋಕನೆಮ್ಮದಿ.

ಇಂದು ಜಗತ್ತಿನಾದ್ಯಂತ ನಡೆಯುತ್ತಿರುವ ವಿದ್ಯಮಾನಗಳನ್ನು ನಾವೆಲ್ಲ ಗಮನಿಸುತ್ತಿದ್ದೇವೆ. ವಿಶ್ವದ ಯಾವುದೇ ಪ್ರದೇಶ ಅಥವಾ ರಾಷ್ಟ್ರ ನೆಮ್ಮದಿಯಿಂದ ಇದೆ ಎಂದು ಹೇಳುವಂತಿಲ್ಲ. ಇಡೀ ಮಾನವ ಸಮುದಾಯ ಸಂಶಯ ಮತ್ತು ಭಯಗಳ ಸುಳಿಗೆ ಸಿಕ್ಕಿಕೊಂಡಂತಿದೆ. ಈಗ ಎಲ್ಲಿ ನೋಡಿದರೂ ರಾಜಕೀಯ ಅಸ್ಥಿರತೆ, ಜನಾಂಗೀಯ ಕಲಹ, ಶಸ್ತ್ರಾಸ್ತ್ರ ಘರ್ಷಣೆ, ಆರ್ಥಿಕ ಅಭದ್ರತೆ, ಕೌಟುಂಬಿಕ ಛಿದ್ರತೆಗಳ ರುದ್ರತಾಂಡವ ನಡೆದಿರುವುದನ್ನು ಕಾಣುತ್ತೇವೆ. ಜೊತೆಗೆ ನಿಸರ್ಗದ ಮುನಿಸಿನಿಂದ ಈಗ ಪ್ರತಿನಿತ್ಯ ಕಂಡು ಕೇಳುತ್ತಿರುವ ಪ್ರವಾಹ, ಭೂಕಂಪ, ಬಿರುಗಾಳಿ, ಬರಗಾಲ, ಹಿಮಪಾತ ಸಮುದ್ರಸ್ಫೋಟ – ಇವುಗಳ ಹಾವಳಿ ಬೇರೆ.

ತಜ್ಞರು ವಿಚಾರ ಮಾಡಿರುವಂತೆ ಈ ನಿಸರ್ಗದ ಮುನಿಸಿನಿಂದಾಗುವ ದುಷ್ಪರಿಣಾಮಗಳಿಗಿಂತ ರಾಜಕೀಯ ಅನಿಷ್ಟ, ಜನಾಂಗೀಯ ದ್ವೇಷ, ಯುದ್ಧ ಮತ್ತು ಭಯೋತ್ಪಾದನೆ, ಮಾದಕ ದ್ರವ್ಯಗಳ ಹಾವಳಿ, ಅಸಂಗತ ಧಾರ್ಮಿಕ ನಂಬಿಕೆಗಳು– ಇವುಗಳಿಂದಾಗುವ ಅನಾಹುತನೇ ಹೆಚ್ಚು ಭೀಕರವಾದುದು.

ಇವುಗಳ ಪರಿವೆಯಿಲ್ಲದೆ ನಾವು ನಾಗರಿಕತೆಯ ಹುಚ್ಚಿನಲ್ಲಿ ಅದರ ಬೆನ್ನು ಹತ್ತಿದ್ದೇವೆ. ಆಧುನಿಕತೆಯ ಅವಸರದಲ್ಲಿ, ಅನುಕರಣೆಯ ಆಕರ್ಷಣೆಯಲ್ಲಿ ನಾವು ಅತ್ಯಂತ ಶಕ್ತಿಯುತವಾದ, ನಮ್ಮೊಳಗೇ ಇರುವ ಭಕ್ತಿಮಾರ್ಗವನ್ನು ಉಪೇಕ್ಷಿಸಿದ್ದೇವೆ. ನಾಗರಿಕತೆ ಬೆಳೆಯ ಬೇಕೇನೋ ನಿಜ. ಆದರೆ, ಅದು ಸಂಸ್ಕೃತಿಯ ನೆಲಗಟ್ಟಿನ ಮೇಲೆ ಬೆಳೆಯಬೇಕು. ಲೆಬರ್ ಎಂಬ ತತ್ತ್ವಜ್ಞಾನಿ ಹೇಳುವಂತೆ **Civilization is based on materialism, but the Culture consists of ideals and values** – ನಾಗರಿಕತೆ ಭೌತಿಕವಸ್ತುಗಳ ಆಧಾರದ ಮೇಲೆ ನಿಂತಿದೆ; ಆದರೆ ಸಂಸ್ಕೃತಿ ಆದರ್ಶ ಮತ್ತು ಮೌಲ್ಯಗಳಿಂದ ತುಂಬಿದೆ.

ನಾಗರಿಕತೆ ಒಂದು ರೀತಿಯಲ್ಲಿ ಯಾವುದೇ ಪ್ರಯತ್ನವಿಲ್ಲದೆ ಬೆಳೆಯಲು ಸಾಧ್ಯವಿದೆ. ಅದೊಂದು ರೀತಿಯ ಅನುಕರಣೆ. ಆದರೆ ಸಂಸ್ಕೃತಿ ಹಾಗಲ್ಲ. ನಾಗರಿಕತೆಯನ್ನು ಬೇಕಾದರೆ ಕೊಂಡು ಅಥವಾ ಸಾಲ ತರಬಹುದೆಂದು ಸಮಾಜ ತಜ್ಞರು ಹೇಳುತ್ತಾರೆ. ಆದರೆ ಸಂಸ್ಕೃತಿಗೆ ಸಾಧನೆ ಬೇಕು. ನಾಗರಿಕತೆ ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಎಂದೂ ನೆಮ್ಮದಿ ನೀಡಿಲ್ಲ ಎಂಬುದಕ್ಕೆ ಇತಿಹಾಸದಲ್ಲೇ ಸಾಕಷ್ಟು ನಿದರ್ಶನಗಳಿವೆ. ಆದರೆ ಸಂಸ್ಕೃತಿ ಎಂದೆಂದಿಗೂ ಶಾಂತಿ ಮತ್ತು ನೆಮ್ಮದಿಗಳನ್ನು ರಕ್ಷಿಸಿಕೊಂಡೇ ಬಂದಿದೆ.

ಈ ಸಂಸ್ಕೃತಿಯ ಮೂಲಾಧಾರವೇ ಭಕ್ತಿ. ಅದರ ಮುಖ್ಯ ಆಶಯವೇ ಸಾತ್ವಿಕ ವ್ಯಕ್ತಿಯ ನಿರ್ಮಾಣ; ಆ ಮೂಲಕ ಸಮರ್ಥ ಸಮಾಜ ನಿರ್ಮಾಣ. 'ಲೋಕದ ಎಲ್ಲ ಸಮಸ್ಯೆಗಳು ಆರಂಭವಾಗುವುದೇ ವ್ಯಕ್ತಿಯಿಂದ. ವ್ಯಕ್ತಿಯ ಹಾರೈಕೆ-ಹಂಬಲಗಳು, ಕನಸು-ಕಲ್ಪನೆಗಳು, ಬಯಕೆ-ಹತಾಶತೆಗಳು, ಕಣ್ಣೀರು-ನಗೆಗಳು ಅಲಕ್ಷ್ಯಕ್ಕೆ ಒಳಗಾದಾಗ, ಹಾಗೆಯೇ ಅವನ ಅಧಿಕಾರ-ಅಹಂಕಾರಗಳು, ಲಜ್ಜೆ-ನಿರ್ಲಜ್ಜೆಗಳು, ಪ್ರಶಂಸೆ-ಪ್ರತೀಕಾರಗಳು ಅಸಹ್ಯದ ಅಂಚು ಮುಟ್ಟಿದಾಗ ಸಮಾಜದ ಸ್ವಾಸ್ಥ್ಯ ಕೆಡುತ್ತದೆ.'

ಈ ಯಾವ ಅವಾಂತರಕ್ಕೂ ಅವಕಾಶವಿಲ್ಲದಿರಬೇಕಾದರೆ ವ್ಯಕ್ತಿ ಭಕ್ತಿಮಾರ್ಗ ಹಿಡಿಯಬೇಕು. ಭಕ್ತಿ ನಮ್ಮಲ್ಲಿ ಸಂಕಲ್ಪಶಕ್ತಿಯನ್ನು, ಸಮಷ್ಟಿ ದೃಷ್ಟಿಯನ್ನು ಬೆಳೆಸುತ್ತದೆ. ಕಾರ್ಯಶ್ರದ್ಧೆ ಮತ್ತು ಶಾಂತಿ-ಸಹನೆಗಳನ್ನು ಮೈಗೂಡಿಸುತ್ತದೆ. ಭಕ್ತಿ ಅಸಹಾಯಕತೆಯ ಅವಸ್ಥೆಯಲ್ಲ; ಅದು ಜೀವನವಿಶ್ವಾಸ!

# ರಾಜ್ಯ ಮಟ್ಟದ ಮುಕ್ತದಳದ ನಾಯಕರುಗಳ/ನಾಯಕಿಯರ ಸಮಾವೇಶ



ಕರ್ನಾಟಕ ರಾಜ್ಯ ಸಂಸ್ಥೆಯಿಂದ ಮೇ 20ರಂದು ರಾಜ್ಯ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಮುಕ್ತದಳಗಳ ನಾಯಕ/ಕಿಯರ ಸಮಾವೇಶವನ್ನು ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಎ. ಖಾಲಿದ್ ರವರು ವಹಿಸಿದರು. ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ಜಂಟಿ ರಾಜ್ಯ ಕಾರ್ಯದರ್ಶಿಗಳಾದ (ಸ್ಕೌ) ಶ್ರೀ ಬಿ.ಕೆ. ಬಸವರಾಜ ಹಾಗೂ ಶ್ರೀಮತಿ ಬಿ.ವಿ. ರಾಮಲತಾ ಉಪಸ್ಥಿತರಿದ್ದರು.

ಈ ಸಂಧರ್ಭದಲ್ಲಿ ಹಿರಿಯ ಕಬ್ ಮಾಸ್ಟರ್ ಹಾಗೂ ಲೀಡರ್ ಟ್ರೈನರ್ ಆದ ಶ್ರೀ ಆರ್. ಚಂದ್ರಶೇಖರನ್, ಕಂಠೀರವ ಓಪನ್ ಟ್ರೂಪ್‌ನ ನಾಯಕರಾದ ಶ್ರೀ ಎಂ. ಶ್ರೀನಿವಾಸ್, ಚಾಮುಂಡಿ ಓಪನ್ ಗ್ರೂಪ್‌ನ ನಾಯಕರಾದ ಶ್ರೀ ಕೆ. ನರಸಿಂಹಮೂರ್ತಿ, ಹಾಸನದ ನಿವೇದಿತಾ ಓಪನ್ ಗೈಡ್ ಕಂಪನಿಯ ನಾಯಕಿ ಶ್ರೀಮತಿ ಕಾಂಚನ ಮಾಲ ಇವರ ಸೇವೆಯನ್ನು ಗುರುತಿಸಿ ರಾಜ್ಯ ಸಂಸ್ಥೆಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.




ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡರವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಸದರಿ ಸಮಾವೇಶದ ರೂಪುರೇಷೆಗಳನ್ನು ವಿವರಿಸಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಿ ಮುಕ್ತದಳಗಳ ಯಶಸ್ವಿಗೆ ಸೂಕ್ತ ಸಲಹೆ ಸಹಕಾರ ಕೊಡಲು ವಿನಂತಿಸಿದರು, ರಾಜ್ಯ ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್ ಸರ್ವರನ್ನು ಸ್ವಾಗತಿಸಿದರು, ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀಮತಿ ಬಿ.ವಿ. ರಾಮಲತಾ ವಂದನಾರ್ಪಣೆ ಮಾಡಿದರು. ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳಾ ರವರು ಕಾರ್ಯಕ್ರಮ ನಿರೂಪಿಸಿದರು.

ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಶಿವಪುರ್, ರಾಜ್ಯ ರೇಂಜರಿಂಗ್ ವಿಭಾಗದ ಮೇಲ್ವಿಚಾರಕರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ಪರೀಕ್ಷಾ ವಿಭಾಗದ ಮೇಲ್ವಿಚಾರಕರಾದ ಶ್ರೀಮತಿ ಕುಮಾರಿ ಹೊನ್ನಮ್ಮ ಸಹಕರಿಸಿದರು. ಸಭೆಯಲ್ಲಿ ವಿವಿಧ ಜಿಲ್ಲೆಯಿಂದ 106 ಮುಕ್ತದಳದ ನಾಯಕರುಗಳು/ನಾಯಕಿಯರು ಭಾಗವಹಿಸಿದರು.

ಸಭಾ ಕಾರ್ಯಕ್ರಮದ ನಂತರ ಈ ಕೆಳಕಂಡ ಮುಕ್ತದಳಗಳು ನಡೆದು ಬಂದ ಹಾದಿಯನ್ನು PPT ಮೂಲಕ ಪ್ರಸ್ತುತಪಡಿಸಲಾಯಿತು.

- ಮಲೆನಾಡು ಓಪನ್ ಗ್ರೂಪ್, ಶಿವಮೊಗ್ಗ ಜಿಲ್ಲೆ: ಶ್ರೀ ರಾಜೇಶ್ ಅವಲಕ್ಕಿ, LT (RSL)
- ಉದಯ ಸ್ಕೌಟ್ ಟ್ರೂಪ್, ಬೆಂಗಳೂರು ದಕ್ಷಿಣ ಜಿಲ್ಲೆ: ಶ್ರೀ ಕೆ.ವಿ. ಸತ್ಯನಾರಾಯಣ್, Pre ALT (S)

- ಶರಣೆ ಕೀತಾಲಾ ದೇವಿ ಓಪನ್ ಯೂನಿಟ್, ಬೀದರ್ ಜಿಲ್ಲೆ: ಡಾ. ಮುಕ್ತು ಬಿ.ಎಂ, ಭಾಲ್ಕಿ
- ಸಮ್ಮತಿ ರೋವರ್ ಕ್ರೂ, ಬೆಂಗಳೂರು ಉತ್ತರ ಜಿಲ್ಲೆ: ಶ್ರೀ ಸತ್ಯಜಿತ್ ಚಟರ್ಜಿ
- ಪ್ಯಾರಡೈಸ್ ಓಪನ್ ಸ್ಕೌಟ್ ಟ್ರೂಪ್, ಮೈಸೂರು ಜಿಲ್ಲೆ: ಶ್ರೀ ಅಜಯ್ ಜೈನ್
- ಶ್ರೀ ಚಾಮುಂಡಿ ಓಪನ್ ಸ್ಕೌಟ್ ಗ್ರೂಪ್, ಬೆಂಗಳೂರು ಉತ್ತರ ಜಿಲ್ಲೆ: ಶ್ರೀ ಹೇಮಂತ್
- ಬಳ್ಳಾರಿ ರಾಘವ ಓಪನ್ ರೋವರ್ ಕ್ರೂ, ಬಳ್ಳಾರಿ ಜಿಲ್ಲೆ: ಶ್ರೀ ಪ್ರಶಾಂತ್
- ಕಂಠೀರವ ಸ್ಕೌಟ್ ಟ್ರೂಪ್, ಬೆಂಗಳೂರು ಉತ್ತರ ಜಿಲ್ಲೆ: ಶ್ರೀ ಪುನೀತ್
- ಸಂಗೊಳ್ಳಿ ರಾಯಣ್ಣ ಓಪನ್ ಕ್ರೂ, ರಾಮನಗರ ಜಿಲ್ಲೆ: ಶ್ರೀ ಸಿದ್ದರಾಜ್
- ಕೊಂಡಜ್ಜಿ ಬಸಪ್ಪ ಸ್ಕೌಟ್ ಟ್ರೂಪ್, ಬೆಂಗಳೂರು ದಕ್ಷಿಣ ಜಿಲ್ಲೆ: ಕೃಷ್ಣಪ್ರಸಾದ್ ಪಿ.ಎನ್
- ಕಡಿಯಾಲ ಓಪನ್ ಟ್ರೂಪ್, ಉಡುಪಿ ಜಿಲ್ಲೆ: ಶ್ರೀ ಆನಂದ ಅಡಿಗ, LT (S)
- ಏಕಲವ್ಯ ಓಪನ್ ರೋವರ್ ಕ್ರೂ, ಹಾಸನ ಜಿಲ್ಲೆ: ಶ್ರೀ ಆರ್.ಜಿ. ಗಿರೀಶ್
- ನೇತಾಜಿ ಸ್ಕೌಟ್ ಗ್ರೂಪ್, ದಾವಣಗೆರೆ: ಶ್ರೀಮತಿ ದಿವ್ಯಶ್ರೀ

ಕಾರ್ಯಕ್ರಮವನ್ನು ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ರವರು ನಿರ್ವಹಿಸಿದರು. ನಂತರ ನಡೆದ ಗುಂಪು ಚರ್ಚೆ ಕಾರ್ಯಕ್ರಮದಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

ನಾಲ್ಕು ವಿಷಯಗಳು:

ಗುಂಪು 01: ಪ್ರಸಕ್ತ ಮುಕ್ತದಳಗಳನ್ನು ಸಕ್ರಿಯಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳು

ನಾಯಕರುಗಳು : ಶ್ರೀನಿವಾಸ್ ಮತ್ತು ಶ್ರೀಮತಿ ಉಮಾದೇವಿ

ಗುಂಪು 02: ಸ್ಥಳೀಯ/ ಜಿಲ್ಲಾ/ ರಾಜ್ಯ ಸಂಸ್ಥೆಯಿಂದ ಮುಕ್ತದಳಗಳು ನಿರೀಕ್ಷಿಸುವ ಸಹಕಾರ ಮತ್ತು ಮುಕ್ತದಳಗಳಿಂದ ಸ್ಥಳೀಯ/ ಜಿಲ್ಲಾ/ ರಾಜ್ಯ ಸಂಸ್ಥೆಯು ನೀಡುವ ಸಹಕಾರ

ನಾಯಕರುಗಳು : ಶ್ರೀ ಸತ್ಯನಾರಾಯಣ್ ಮತ್ತು ಶ್ರೀಮತಿ ಕಾಂಚನಮಾಲ

ಗುಂಪು 03: ಮುಕ್ತದಳಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಲು ಇರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯಗಳು

ನಾಯಕರುಗಳು : ಶ್ರೀ ಸುರೇಶ್ ಮತ್ತು ಶ್ರೀಮತಿ ಕುಮುದ

ಗುಂಪು 04: ಮುಕ್ತದಳಗಳ ಸಂಖ್ಯೆಯನ್ನು ಸ್ಥಳೀಯವಾಗಿ ಹೆಚ್ಚಿಸಲು ನಿಮ್ಮ ಮುಕ್ತದಳಗಳ ಸ್ಥಳೀಯ/ ಜಿಲ್ಲಾ/ ರಾಜ್ಯ ಸಂಸ್ಥೆಯಲ್ಲಿ ಕೈಗೊಳ್ಳಬೇಕಾಗದ ಕ್ರಮ

ನಾಯಕರುಗಳು: ಶ್ರೀ ಆನಂದ ಅಡಿಗ ಮತ್ತು ಶ್ರೀಮತಿ ಕಾತ್ಯಾಯಿನಿ

* ಗುಂಪು ಚರ್ಚೆಯ ತೀರ್ಮಾನಗಳನ್ನು ಸಭೆಯಲ್ಲಿ ಮಂಡಿಸಲಾಯಿತು.
* ನಂತರ ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳಾ 2023–24ನೇ ಸಾಲಿನ ರಾಜ್ಯ ಮಟ್ಟದ ಯೋಜಿತ ಕಾರ್ಯಕ್ರಮ, ಚಟುವಟಿಕೆ ಹಾಗೂ ತರಬೇತಿಯ ಬಗ್ಗೆ ಮಾಹಿತಿಯನ್ನು ನೀಡಿದರು.
* ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್‌ಭಟ್ ಮುಕ್ತದಳದ ನಾಯಕರುಗಳ ಕಾರ್ಯಚಟುವಟಿಕೆಯ ದಾಖಲೆ, ಸ್ಥಳದ ಮಾಹಿತಿ, ನಿರ್ವಹಣೆಯ ಹಾಗೂ ಇನ್ನಿತರ ಮುಕ್ತದಳದ ಪ್ರಗತಿಯ ಬಗ್ಗೆ ಮತ್ತು ಲೆಕ್ಕ ಪತ್ರವನ್ನು ಜಿಲ್ಲಾ ಸಂಸ್ಥೆಗೆ ನೀಡುವ ಬಗ್ಗೆ, ಕಾರ್ಯಕ್ರಮ, ತರಬೇತಿಯನ್ನು ಸಂಘಟಿಸಿದ ಬಗ್ಗೆ ವರದಿಯನ್ನು ಛಾಯಾಚಿತ್ರದೊಂದಿಗೆ ಕಳುಹಿಸಿ ಕೊಡುವ ಬಗ್ಗೆ, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಯುವ ಕಾರ್ಯಕ್ರಮ ಹಾಗೂ ತರಬೇತಿಯಲ್ಲಿ ಭಾಗವಹಿಸುವ ಬಗ್ಗೆ ಮಾಹಿತಿಯನ್ನು ನೀಡಿದರು.
* ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಹಿಸಿಕೊಂಡು ಅಧ್ಯಕ್ಷೀಯ ಮಾತನಾಡಿ ಮಾರ್ಗದರ್ಶನ ಮಾಡಿದರು.
* ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ಬಸವರಾಜ ಮತ್ತು ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಸ್ಥಾನಿಕ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಹಿರಿಯ ಕಬ್ ಮಾಸ್ಟರ್, ಶ್ರೀ ಆರ್. ಚಂದ್ರಶೇಖರನ್, ರಾಜ್ಯ ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್, ಶ್ರೀಮತಿ ಶಶಿಕಲಾ, LT (G), ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್‌ಭಟ್, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳಾ, ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಶಿವಪುರ್, ರಾಜ್ಯ ಪರೀಕ್ಷಾ ಮೇಲ್ವಿಚಾರಕರಾದ ಶ್ರೀಮತಿ ಕುಮಾರಿ ಹೊನ್ನಮ್ಮ, ಶ್ರೀ ರಾಜೇಶ್ ಅವಲಕ್ಕಿ, LT (RSL) ಕಾರ್ಯಕ್ರಮದಲ್ಲಿ ಭಾಗವಹಿಸಿದರು.

* ಸಮಾವೇಶದ ಯಶಸ್ವಿಯ ಬಗ್ಗೆ ಮುಕ್ತದಳದ ನಾಯಕರುಗಳಾದ ಶ್ರೀಮತಿ ಶಾರದಾ, ದಾವಣಗೆರೆ, ಶ್ರೀ ಅಜಯ್ ಜೈನ್ ಮೈಸೂರು, ಡಾ. ಮುಕ್ತು ಬಿ. ಬೀದರ್, ಶ್ರೀಮತಿ ಕಾಂಚನ ಮಾಲ, ಹಾಸನ ಜಿಲ್ಲೆ ಇವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು.
* ರಾಜ್ಯ ರೇಂಜರಿಂಗ್ ವಿಭಾಗದ ಮೇಲ್ವಿಚಾರಕರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ ಇವರು ಕಾರ್ಯಕ್ರಮ ನಿರೂಪಿಸಿದರು.

ಸಮಾರೋಪ ಸಮಾರಂಭದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಮುಖ್ಯ ಆಯುಕ್ತರು ತಮ್ಮ ಭಾಷಣದಲ್ಲಿ "ಇಂದಿನ ಮುಕ್ತ ದಳ ನಾಯಕರ ಸಮಾವೇಶದಲ್ಲಿ ನಡೆದ ಗುಂಪು ಚರ್ಚೆಯ ವಿಷಯಗಳ ಬಗ್ಗೆ ನಿರ್ಣಯಗಳ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ.. ಅದನ್ನು ರಾಜ್ಯ ಸಂಸ್ಥೆಯ ಪದಾಧಿಕಾರಿಗಳಿಗೂ ಪ್ರತಿಯನ್ನು ನೀಡಿ ಈ ವಿಷಯದ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇನೆ" ಎಂದು ಆಶ್ವಾಸನೆ ನೀಡಿದರು.

"ನಾಲಕ್ಕು ಮತ್ತು ಐದು ಜನರ ಮುಕ್ತ ದಳದ ಒಂದು ಗುಂಪನ್ನು ಮಾಡಿ ಯಾವುದಾದರೂ ವಿದೇಶದಲ್ಲಿ ನಡೆಯುವ ಮುಕ್ತದಳಗಳಿಗೆ ಭೇಟಿ ನೀಡಿ ಅವರ ಚಟುವಟಿಕೆಗಳನ್ನು ವೀಕ್ಷಣೆ ಮಾಡಿ ಮಾರ್ಗದರ್ಶನ ಪಡೆಯುವುದಕ್ಕೆ ರಾಜ್ಯ ಸಂಸ್ಥೆಯಿಂದಲೇ ಖರ್ಚು ವೆಚ್ಚಗಳನ್ನು ಭರಿಸಿ ಕಳುಹಿಸಿ ಕೊಡಲಾಗುವುದು. ಈ ಬಾರಿ 10,000 ಮುಕ್ತ ದಳದ ವಿದ್ಯಾರ್ಥಿಗಳಿಗೆ ನ್ಯಾಷನಲ್ ಓಪನ್ ಯೂನಿಟ್ ಜಾಂಬೂರಿ ಮಾಡುವುದರ ಬಗ್ಗೆ ಆಲೋಚನೆ ಇದೆ. ಬಿಬಿಎಂಪಿ ವಾರ್ಡ್‌ನಲ್ಲಿ 200ಕ್ಕೂ ಹೆಚ್ಚು ವಾರ್ಡ್‌ಗಳಿವೆ. ಪ್ರತಿಯೊಂದು ವಾರ್ಡ್‌ನಲ್ಲಿ ಒಂದೊಂದು ಮುಕ್ತದಳಗಳನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನಿಸುವುದು ಹಾಗೂ ಪ್ರಾರಂಭಿಕ ಶಿಬಿರ ಅಥವಾ ಮೂಲ ತರಬೇತಿ ಶಿಬಿರ ಮಾಡುವುದರ ಮೂಲಕ ಮುಕ್ತದಳದ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

ಮುಖ್ಯ ದಳಗಳ ಸಂಖ್ಯೆಯನ್ನು ಹೆಚ್ಚಿಸುವ ಕ್ರಮವಾಗಿ ನೂತನವಾಗಿ ಆನ್ಲೈನ್ ಉದ್ಯೋಗ ಮೇಳವನ್ನು ಸ್ಕೌಟ್–ಗೈಡ್ ವಿದ್ಯಾರ್ಥಿಗಳಿಗೆ ಆಯೋಜನೆ ಮಾಡಿ, ಆಸಕ್ತಿ ಇರುವವರನ್ನು ಆಯ್ಕೆ ಮಾಡಿಕೊಂಡು ನಮ್ಮ ಚಟುವಟಿಕೆಗಳಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಿದೆ" ಎಂದು ನುಡಿದರು.

"ಒಂದೊಂದು ಮುಕ್ತ ದಳದಲ್ಲಿ ಒಂದೊಂದು ವಿಶೇಷ ಕಾರ್ಯಕ್ರಮವನ್ನು ಮಾಡುವ ರೀತಿಯಾಗಿ ನಿಮ್ಮ ದಳವನ್ನು ರೂಪಿಸಿಕೊಳ್ಳಿ, ವಿಶೇಷ ಕಾರ್ಯಕ್ರಮಗಳು ವಿಶೇಷ ಚಟುವಟಿಕೆಗಳು ನಡೆಯುತ್ತಿದ್ದಲ್ಲಿ ಸಾರ್ವಜನಿಕರು ಪೋಷಕರು ವಿದ್ಯಾರ್ಥಿಗಳನ್ನು ಮುಖ್ಯದಳಕ್ಕೆ ಸೇರಿಸಲು ಮುಂದಾಗುತ್ತಾರೆ ಇದು ಒಂದು ವಿಶಿಷ್ಟತೆಯನ್ನು ತೋರಿಸುತ್ತದೆ" ಎಂದು ಸಲಹೆ ನೀಡಿದರು.





## National Planning Strategic Workshop

Smt Jyothi H.K., Ranganath of Bengaluru North District was a Participant in National Planning Strategic Workshop VISION 2034 held at National Headquarters, New Delhi from 11th to 15th March 2023. 62 Members participated from 22 States. Ms. Chempaka Emalin Pahamin, Chair, APR Committee, WAGGGS and Country contact, India, Ms. Roopa, Regional Manager, APR, WAGGGS and Mr. Prasanna Serivastava were Resource Persons.

Intensive discussions were held on Strategic Planning to Achieve Vision 2034.






# ಜೂನ್ 2023ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 01 | ವಿಶ್ವ ಪರಿಸರ ದಿನಾಚರಣೆ (ಸ್ಕೌಟ್-ಗೈಡ್ ನಡಿಗೆ ಕಡೆಗೆ ಬೀಜದುಂಡೆ ತಯಾರಿಸುವುದು ಸಾವಯವ ಕೃಷಿ ಮಾರ್ಗದರ್ಶನ ಗಿಡನೆಡುವ ಕಾರ್ಯಕ್ರಮ) | ಜೂನ್ 05 | ಸ್ಥಳೀಯ ಮಟ್ಟದಲ್ಲಿ |
| 02 | ಯೋಗ ದಿನಾಚರಣೆ | ಜೂನ್ 21 | ಸ್ಥಳೀಯ ಮಟ್ಟದಲ್ಲಿ |
| 03 | ಕಬ್ಸ್-ಬುಲ್‌ಬುಲ್ಸ್, ಸ್ಕೌಟ್-ಗೈಡ್ಸ್‌ಗಳಿಗೆ ದೇಶಭಕ್ತಿ ಗೀತಗಾಯನ ಮತ್ತು ರೋವರ್ಸ್-ರೇಂಜರ್ಸ್‌ಗಳಿಗೆ ಜಾನಪದ ಗೀತೆಗಳ ಸ್ಪರ್ಧೆ | ಜೂನ್‌ನಿಂದ ಆಗಸ್ಟ್ 2023 | ಸ್ಥಳೀಯ ಮಟ್ಟದಲ್ಲಿ |
| 04 | ದ್ವಿತೀಯ ಚರಣ್ ಕಬ್ಸ್ ಮತ್ತು ರಜತ್ ಪಂಕ್ ಬುಲ್‌ಬುಲ್ಸ್‌ಗಳಿಗೆ ಪರೀಕ್ಷಾ ಶಿಬಿರ | ಜೂನ್ | ಸ್ಥಳೀಯ ಮಟ್ಟದಲ್ಲಿ |
| 05 | ಮುಖ್ಯ ಶಿಕ್ಷಕರುಗಳು/ಎಸ್.ಡಿ.ಎಂ.ಸಿ. ಅಧ್ಯಕ್ಷರು & ಸದಸ್ಯರುಗಳಿಗೆ ಸಾಮಾನ್ಯ ಮಾಹಿತಿ ಶಿಬಿರ ಹಾಗೂ ವಾರ್ಷಿಕ ಯೋಜನೆ ಬಿಡುಗಡೆ ಕಾರ್ಯಕ್ರಮ | ಜೂನ್ | ಸ್ಥಳೀಯ ಮಟ್ಟದಲ್ಲಿ |
| 06 | ಸ್ಕೌಟ್ಸ್-ಗೈಡರ್ಸ್ ಸಮಾವೇಶ | ಜೂನ್ ಮತ್ತು ಜುಲೈ | ಸ್ಥಳೀಯ ಮಟ್ಟದಲ್ಲಿ |
| 07 | ಸ್ಥಳೀಯ ವಾರ್ಷಿಕ ಮಹಾಸಭೆ | ಜೂನ್ | ಸ್ಥಳೀಯ ಮಟ್ಟದಲ್ಲಿ |
| 08 | ಸಿ.ಆರ್.ಪಿ., ಬಿ.ಆರ್.ಪಿ., ಟಿ.ಪಿ.ಇ.ಓ. & ನೋಡಲ್ ಅಧಿಕಾರಿಗಳಿಗೆ ಮಾಹಿತಿ ಶಿಬಿರ, 2023-24ನೇ ಸಾಲಿನ ವಾರ್ಷಿಕ ಯೋಜನೆ ಕಾರ್ಯಗತ ಮತ್ತು ಬಿಡುಗಡೆ ಕಾರ್ಯಕ್ರಮ | ಜೂನ್ | ಸ್ಥಳೀಯ ಮಟ್ಟದಲ್ಲಿ |
| 09 | ಸ್ಕೌಟರ್ಸ್-ಗೈಡರ್ಸ್‌ಗಳ ಪುನಃಶ್ಚೇತನ ತರಬೇತಿ ಶಿಬಿರ | ಜೂನ್ ಅಥವಾ ಜುಲೈ | ಸ್ಥಳೀಯ ಮಟ್ಟದಲ್ಲಿ |
| 10 | ಕಬ್ ಮಾಸ್ಟರ್ಸ್ /ಸ್ಕೌಟ್ ಮಾಸ್ಟರ್ಸ್ /ಫ್ಲಾಕ್ ಲೀಡರ್ಸ್/ ಗೈಡ್ ಕ್ಯಾಪ್ಟನ್ಸ್‌ಗಳ ರಾಜ್ಯಮಟ್ಟದ ಮುಂದುವರೆದ ತರಬೇತಿ ಶಿಬಿರಗಳು | ಜೂನ್ 22 ರಿಂದ 28 ರವರೆಗೆ | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ |
| 11 | ಕೊಪ್ಪಳ ವಿಭಾಗದ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್ ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್‌ಗಳಿಗೆ ರಾಜ್ಯಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಮುಂದುವರೆದ ತರಬೇತಿ ಶಿಬಿರ | 22 ರಿಂದ 29 ಜೂನ್ 2023ರ ವರೆಗೆ | ಜಿಲ್ಲಾ ತರಬೇತಿ ಕೇಂದ್ರ ಗೊನ್ನಳ್ಳಿಗ್ರಾಮ ಕೊಪ್ಪಳ |
| 12 | ಕಲಬುರಗಿ ವಿಭಾಗದ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್‌ಗಳಿಗೆ ರಾಜ್ಯ ಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಮುಂದುವರೆದ ತರಬೇತಿ ಶಿಬಿರ | 22 ರಿಂದ 28 ಜೂನ್ 2023 ರವರೆಗೆ | ಕಲಬುರಗಿ ವಿಶ್ವವಿದ್ಯಾಲಯ ಕಲಬುರಗಿ |
| 13 | ವಿಜಯಪುರ ವಿಭಾಗದ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್,2023ರ ವರೆಗೆ ಗೈಡ್ಸ್ ಕ್ಯಾಪ್ಟನ್‌ಗಳ ರಾಜ್ಯ ಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಮುಂದುವರೆದ ತರಬೇತಿ ಶಿಬಿರ | 22 ರಿಂದ 28 ಜೂನ್ | ವಾಸಂತಿಬಾಯಿ ಜಿಗಜಿನಿ ಜಿಲ್ಲಾ ತರಬೇತಿ ಕೇಂದ್ರ ಬುರಾಣಪುರ ವಿಜಯಪುರ |
| 14 | ಉಡುಪಿ ವಿಭಾಗದ ಮಟ್ಟದ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್ಸ್, ಗೈಡ್2023ರ ವರೆಗೆ ಕ್ಯಾಪ್ಟನ್‌ಗಳಿಗೆ ರಾಜ್ಯ ಮಟ್ಟದಿಂದ ಆಯೋಜಿಸಿರುವ ವಿಭಾಗೀಯ ಮಟ್ಟದ ಮುಂದುವರೆದ ತರಬೇತಿ ಶಿಬಿರ | 22 ರಿಂದ 28 ಜೂನ್ ಜಿಲ್ಲಾ ತರಬೇತಿ ಕೇಂದ್ರ ಉಡುಪಿ | ಡಾ. ವಿ.ಎಸ್. ಆಚಾರ್ಯ |

– ರಾಜ್ಯ ಕಾರ್ಯದರ್ಶಿ

ಕೊಡಗು ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳು ಹಾಗೂ
ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರವರ ಕಾರ್ಯಾಲಯ,
ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ.
e-mail id: ceokodagu@gmail.com, cpo.kodagu@gmail.com

18/2023-24
12/05/23

File No: PLN-SVPLOSVPL/2/2022-01-KZP. ದಿನಾಂಕ: 12-05-2023

# ಪ್ರಶಂಸನಾ ಪತ್ರ

ಮಾನ್ಯರೇ,

ಕರ್ನಾಟಕ ವಿಧಾನಸಭಾ ಚುನಾವಣೆ - 2023ರ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನದ ಮಹತ್ವವನ್ನು ಸಾರುವ ಹಾಗೂ ಮತದಾನದ ಶೇಕಡವಾರು ಪ್ರಮಾಣವನ್ನು ಹೆಚ್ಚಿಸುವ ಸದುದ್ದೇಶದಿಂದ ವೈವಿಧ್ಯಮಯ ಹಾಗೂ ವಿನೂತನ ಕಾರ್ಯಕ್ರಮಗಳ ಮೂಲಕ ಮತದಾರರ ಶಿಕ್ಷಣ, ಮಾಹಿತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು (SVEEP) ಆಯೋಜಿಸಲಾಯಿತು.

ಈ ಸುಸಂಧರ್ಭದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಸಕ್ರಿಯವಾಗಿ SVEEP ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ದಿನಾಂಕ:05-05-2023 ರಂದು ಮಡಿಕೇರಿ ನಗರದಲ್ಲಿ ತಮ್ಮ ಸಂಸ್ಥೆಯ ಸಹಯೋಗದೊಂದಿಗೆ "ಬೃಹತ್ ಜಾಥಾ" ಕಾರ್ಯಕ್ರಮ ಆಯೋಜಿಸಿ ಮತದಾರರಲ್ಲಿ ಮತದಾನದ ಜಾಗೃತಿ ಸಂದೇಶ ಸಾರಲು ಹಾಗೂ ಮತದಾನದ ದಿನದಂದು ವಿಶೇಷಚೇತನರು ಹಾಗೂ ಹಿರಿಯ ನಾಗರೀಕರು ಮತದಾನ ಮಾಡಲು ಸಹಾಯ ಮಾಡಲು ತಮ್ಮ ಸಂಸ್ಥೆಯ ಮೂಲಕ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರಾಗಿ ನಿಯೋಜಿಸಿ ಸೇವೆ ಸಲ್ಲಿಸಿ ಸಹಕರಿಸುವ ಮೂಲಕ ಜಿಲ್ಲೆಯ ಒಟ್ಟಾರೆ ಮತದಾನದ ಪ್ರಮಾಣವನ್ನು ಹೆಚ್ಚಿಸುವಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯೊಂದಿಗೆ ಸಹಕರಿಸಿರುತ್ತೀರಿ.

ತಮ್ಮ ಸಹಕಾರಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, SVEEP ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತಮ್ಮ ಸೇವೆಯನ್ನು ಅಭಿನಂದಿಸಿ, ಈ ಪ್ರಶಂಸನಾ ಪತ್ರವನ್ನು ತಮಗೆ ಸಮರ್ಪಿಸುತ್ತಿದ್ದೇವೆ.

ಧನ್ಯವಾದಗಳೊಂದಿಗೆ,

ಅಧ್ಯಕ್ಷರು,
ಕೊಡಗು ಜಿಲ್ಲಾ ಸ್ವೀಪ್ ಸಮಿತಿ ಹಾಗೂ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ವಿಶ್ವ ಪರಿಸರ ದಿನಾಚರಣೆ–2023

**ಪ್ಲಾಸ್ಟಿಕ್ – ಮರುಕಲ್ಪನೆ, ಮರುಸೃಷ್ಟಿ, ಪುನಃಸ್ಥಾಪನೆ**

**ಧ್ಯೇಯ ವಾಕ್ಯ**

**'ಪ್ಲಾಸ್ಟಿಕ್ ಮಾಲಿನ್ಯವನ್ನು ನಿರ್ಮೂಲನೆ ಮಾಡುವುದು'**

## ಪರಿಸರ ವ್ಯವಸ್ಥೆಯ ಪುನಃಸ್ಥಾಪನೆ

**ಸಾಪ್ತಾಹಿಕ ಚಟುವಟಿಕೆಗಳು (ಸ್ಥಳೀಯ ಸಂಸ್ಥೆವಾರು ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮ)**

**2023 ಜೂನ್ ತಿಂಗಳ ಪ್ರತೀ ಆದಿತ್ಯವಾರ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯಲ್ಲಿ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ರಾಜ್ಯ ಸಂಸ್ಥೆಯಿಂದ ನೀಡಿರುವ ಚಟುವಟಿಕೆಯ ಪ್ರಕಾರ ಜೂಮ್, ಗೂಗಲ್ ಮೀಟ್, ಮೈಕ್ರೋಸಾಫ್ಟ್ ಟೀಮ್ಸ್ ಇತರ ಆ್ಯಪ್‌ನ್ನು ಬಳಸುವುದರ ಮೂಲಕ ಶಿಬಿರಾಗ್ನಿ ಕಾರ್ಯಕ್ರಮವನ್ನು ಸಂಘಟಿಸಿ ಕಾರ್ಯಕ್ರಮದ ವರದಿಯನ್ನು ಜಿಲ್ಲಾ ಸಂಸ್ಥೆಯ ಮೂಲಕ ರಾಜ್ಯ ಸಂಸ್ಥೆಗೆ ಕಳುಹಿಸುವುದು.**

### 1. ವರ್ಚ್ಯುಯಲ್ ಕ್ಯಾಂಪ್ ಫಯರ್ (ಮೊದಲ ವಾರ)

**ಭೂಮಿ**

1. ನಿಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲಿ ಒಂದು ಅಥವಾ ಹೆಚ್ಚು ಸಸಿಗಳನ್ನು ನೆಡುವುದು.
2. ತಮ್ಮ ದಳಮಟ್ಟದಲ್ಲೆ ಅಥವಾ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ನಡೆಯುವ ಬೀಜದುಂಡೆ ಸಿದ್ಧತೆಯಲ್ಲಿ ಪಾಲ್ಗೊಳ್ಳುವುದು.
3. ಪರಿಸರ ಜಾಗೃತಿಯನ್ನು ಮೂಡಿಸಲು ತಮ್ಮ ದಳ ಸದಸ್ಯರೊಂದಿಗೆ ಜಾಥಾ/ಸೈಕಲ್ ಜಾಥಾಗಳಲ್ಲಿ ಭಾಗವಹಿಸುವುದು.
4. ಪರಿಸರ ವಿಷಯವಾಗಿ ಪ್ರಬಂಧ ಸ್ಪರ್ಧೆ/ ಪೋಸ್ಟರ್ ತಯಾರಿಸುವ ಸ್ಪರ್ಧೆ/ ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸುವುದು.
5. ಶಾಲೆ ಅಥವಾ ಮನೆಯ ಕಿಚನ್ ಗಾರ್ಡನ್/ ತೆರೆಸ್ ಗಾರ್ಡನ್‌ನಲ್ಲಿ ಹಣ್ಣು, ಹೂವು, ತರಕಾರಿಗಳನ್ನು ಬೆಳೆಸುವುದು.
6. ಅರ್ಥ್ ಟ್ರೈಬ್ (Earth Tribe)ಗೆ ಸೇರಿಕೊಳ್ಳಿ https://earthtribe.scout.org/ ಮತ್ತು "ಚಾಂಪಿಯನ್ಸ್ ಫಾರ್ ನೇಚರ್" ಸವಾಲು ತೆಗೆದುಕೊಳ್ಳಿ.

### 2. ವರ್ಚ್ಯುಯಲ್ ಕ್ಯಾಂಪ್ ಫಯರ್ (ಎರಡನೇ ವಾರ)

**ನೀರು**

1. ಜಲಮಾಲಿನ್ಯ ತಡೆಗಟ್ಟುವ ಕುರಿತು ಜಾಗೃತಿ ಮೂಡಿಸುವುದು.
2. ಮಳೆನೀರು ಕೊಯ್ಲಿನ ಪ್ರಯೋಜನಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ನೀರನ್ನು ಮಿತವಾಗಿ ಬಳಸುವುದು.
3. ಕೊಳ/ಸರೋವರ/ಸಮುದ್ರದ ದಡ ಇತ್ಯಾದಿಗಳಲ್ಲಿ ಸ್ವಚ್ಛಮಾಡಲು ಸ್ವಯಂಸೇವಕರಾಗಿ ಸೇವೆ ಸಲ್ಲಿಸುವುದು.
4. ಪ್ಲಾಸ್ಟಿಕ್ ಟೈಡ್ ಟರ್ನರ್ ಚಾಲೆಂಜ್ ಬ್ಯಾಡ್ಜ್‌ನಲ್ಲಿ ಕೆಲಸ ಮಾಡುವುದು.
5. ನೀರಿನ ಅಡಿಯಲ್ಲಿನ ಜೀವವನ್ನು ರಕ್ಷಿಸಲು ಪ್ರೇರಕ ವಿಡಿಯೋವನ್ನು ಮಾಡುವುದು.

### 3. ವರ್ಚ್ಯುಯಲ್ ಕ್ಯಾಂಪ್ ಫಯರ್ (ಮೂರನೇ ವಾರ)

**ವಾಯು**

1. ವಾಯು ಮಾಲಿನ್ಯವನ್ನು ತಡೆಗಟ್ಟಲು ಜಾಗೃತಿ ಮೂಡಿಸುವುದು.
2. ಏಕ ಬಳಕೆಯ ಪ್ಲಾಸ್ಟಿಕ್ ನಿಲ್ಲಿಸಲು ಮತ್ತು ಅದು ಪರಿಸರಕ್ಕೆ ಹೇಗೆ ಹಾನಿಕಾರಕವಾಗಿದೆ ಎಂಬುದನ್ನು ಅರಿತು, ತಮ್ಮ ಮನೆಯಿಂದ ಪ್ಲಾಸ್ಟಿಕ್ ಬಳಸದೇ, ಯಾವ ಯಾವ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬಾರದು ಅದಕ್ಕೆ ಬದಲಾಗಿ ಏನನ್ನು ಬಳಸಬಹುದು ಎಂಬ ಚಾರ್ಟ್‌ಅನ್ನು ಸಿದ್ಧಪಡಿಸಿ ಮತ್ತು ಇತರರಿಗೆ ತಿಳಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು.
3. ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ನಿಷೇಧಿಸಿ ಮತ್ತು ಬಟ್ಟೆಯ ಚೀಲಗಳನ್ನು ಬಳಸಿ– ಹಳೆಯ ಬಟ್ಟೆ/ ಬೆಡ್‌ಶೀಟ್‌ಗಳು/ ಬಟ್ಟೆಯಿಂದ ಶಾಪಿಂಗ್ ಬ್ಯಾಗ್‌ಗಳನ್ನು ತಯಾರಿಸಿ ನಿಮ್ಮ ದೈನಂದಿನ ಅಗತ್ಯಗಳಿಗಾಗಿ ಬಳಸಲು ಪ್ರಾರಂಭಿಸಿ.
4. ದಿನಪತ್ರಿಕೆಯನ್ನು ಬಳಸಿಕೊಂಡು ಪೇಪರ್ ಬ್ಯಾಗ್‌ಗಳನ್ನು ತಯಾರಿಸಿ ಮತ್ತು ವಿತರಿಸಿ, ಪೇಪರ್ ಬ್ಯಾಗ್‌ಗಳನ್ನು ಹೇಗೆ ತಯಾರಿಸಬೇಕೆಂದು ಸ್ಥಳೀಯ ಅಂಗಡಿಯವರಿಗೆ ತಿಳಿಸಿ ಕೊಡಿ.
5. ಸಮುದಾಯ ಸೇವೆಯನ್ನು ನಿರ್ವಹಿಸುವುದು.

### 4. ವರ್ಚ್ಯುಯಲ್ ಕ್ಯಾಂಪ್ ಫಯರ್ (ನಾಲ್ಕನೇ ವಾರ)

**ಸೂರ್ಯ**

1. ಸೌರಶಕ್ತಿಯ ಮತ್ತು ಅದರ ಪ್ರಯೋಜನಗಳ ಬಗ್ಗೆ ತಿಳಿಯಿರಿ.
2. ಈ ಕೆಳಗಿನ ಯಾವುದಾದರೂ ಒಂದನ್ನು ಪ್ರದರ್ಶಿಸಿ: • ಸೌರಕಲೆ, ಸೌರ ಅಡುಗೆಪಾತ್ರೆ, ಸೌರ ಕಾರ್, ಸೌರ ನೀರಿನ ಕಾರಂಜಿ, ಸೌರ ಫಲಕ ಕಲೆ, ಸೌರ ದಿಕ್ಸೂಚಿ, ಶಾಖದ ಬಣ್ಣ, ಸೌರಟೋಪಿ, ಸೌರ ಆಟಿಕೆಗಳು, ಸೌರ ಶಕ್ತಿ ಪ್ರದರ್ಶನ.
3. ಕೆಳಕಂಡ ಪ್ರಾವಿಣ್ಯತಾ ಪದಕಗಳಿಗಾಗಿ ಕೆಲಸ ಮಾಡಿ. • ಪರಿಸರತಜ್ಞ/ ವಿಶ್ವ ಸಂರಕ್ಷಣೆ/ ಅರಣ್ಯ ತಜ್ಞ/ ರೈತ/ ನೈರ್ಮಲ್ಯ ಪ್ರವರ್ತಕ/ ಸೌರಶಕ್ತಿ.
4. ದೃಶ್ಯಗಳು:– ನಾವು ಬಳಸುವ ಶಕ್ತಿ ಎಷ್ಟು ಸ್ವಚ್ಛವಾಗಿದೆ,,? ಶುದ್ಧ ಮತ್ತು ನವೀಕರಿಸಬಹುದಾದ ಶಕ್ತಿಯ ವಿವಿಧ ಮೂಲಗಳ ಬಗ್ಗೆ ಕಲಿಯುವುದು ಹಾಗೂ ಸ್ಕೌಟಿಂಗ್‌ನ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಮತ್ತು ಸೌಲಭ್ಯಗಳಲ್ಲಿ ಈ ಅಭ್ಯಾಸಗಳನ್ನು ಸಂಯೋಜಿಸುವ ಮಾರ್ಗಗಳನ್ನು ಅನ್ವೇಷಿಸುವುದು.
5. "ಸ್ಕೌಟ್ ಗೋ ಸೋಲಾರ್" ಸವಾಲಿನಲ್ಲಿ ಭಾಗವಹಿಸುವುದು https://earthtribe.scout.org/challenges/scouts-go-solar

**ನಾಲ್ಕು ಭಾನುವಾರಗಳಂದು ಆನ್‌ಲೈನ್ ಮುಖಾಂತರ ಶಿಬಿರಾಗ್ನಿ ಕಾರ್ಯಕ್ರಮಗಳಲ್ಲಿ ಪರಿಸರಕ್ಕೆ ಸಂಬಂಧಪಟ್ಟ ನಾಟಕ, ಹಾಡು, ಕವನ, ಕಥೆಗಳನ್ನು ಭೂಮಿ, ನೀರು, ಗಾಳಿ, ಸೂರ್ಯ ಇತ್ಯಾದಿಗಳ ಬಗ್ಗೆ ಮಕ್ಕಳಿಂದ ಚಟುವಟಿಕೆಗಳನ್ನು ಮಾಡುವುದು ಜೊತೆಗೆ ಪೋಸ್ಟರ್ ಮಾಡುವ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಚರ್ಚಾಸ್ಪರ್ಧೆ, ಪಥಸಂಚಲನ, ರ್‍ಯಾಲಿ, ಸಸಿ ನೆಡುವುದು, ಪರಿಸರಕ್ಕೆ ಸಂಬಂಧಪಟ್ಟಂತಹ ವಿವಿಧ ವಿನೂತನ ಹಾಗೂ ಅರ್ಥಪೂರ್ಣವಾದಂತಹ ಕಾರ್ಯಕ್ರಮ ಮತ್ತು ಜಾಗೃತಿಗಳನ್ನು ತಮಗೆ ಅನುಕೂಲವಾಗುವಂತೆ ದಳ ಹಂತದಲ್ಲಿ ಸ್ಕೌಟ್–ಗೈಡ್ ಮಕ್ಕಳ ಮುಖೇನಾ ಉತ್ತಮವಾದಂತಹ ಕಾರ್ಯಕ್ರಮಗಳನ್ನು ಸಂಘಟಿಸಿ, ಪರಿಸರದ ರಕ್ಷಣೆ ಮತ್ತು ಜಾಗೃತಿಯನ್ನು ಮೂಡಿಸುವುದು.**

**ವರದಿಯನ್ನು ಸಲ್ಲಿಸುವ ವಿಧಾನ:** ಈ ಮೇಲಿನ ಚಟುವಟಿಕೆಗಳಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಮತ್ತು ದಳನಾಯಕರುಗಳು ಚಟುವಟಿಕೆಗಳಲ್ಲಿ ಭಾಗವಹಿಸಿ, ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ (Social Media - Face Book, Instagram) ಈ hashtag ಗಳನ್ನು ಬಳಸುವುದು #bsgkarnataka, #bsgindia ಪ್ರಕಟಿಸುವುದು. ಸದರಿ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಿರುವರದಿ ಮತ್ತು ಛಾಯಚಿತ್ರಗಳನ್ನು ಈ ಕೆಳಗಿನ ಗೂಗಲ್ ಲಿಂಕ್‌ನಲ್ಲಿ ದಿನಾಂಕ 30.06.2023ರ ಇಖಗಾಗಿ ಅಪ್‌ಲೋಡ್ ಮಾಡುವುದು. ವರದಿಗಳನ್ನು ಮತ್ತು ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡಿದವರಿಗೆ ಇ–ಪ್ರಮಾಣಪತ್ರ ನೀಡಲಾಗುವುದು.

https://rebrand.ly/environmentday2023



bsgkarnataka

Messengers of Peace

SCOUTS for SDGs

# R.T. NAGAR GROUP OF INSTITUTIONS

ESTD: 1991

Details of Institutions run by
R.T. Nagar Educational Trust Institutions
located at R.T. Nagar Main Campus, Bengaluru-560032

In and around Bengaluru

| | | | |
|---|---|---|---|
| 1. | **R.T. NAGAR PUBLIC SCHOOL**<br>Ganganagar, Bengaluru-32 | 1991 | Nursery & Primary<br>(English Medium) |
| 2. | **R.T. NAGAR HIGH SCHOOL**<br>Ganganagar, Bengaluru-32 | 1992 | High School<br>(English Medium) |
| 3. | **R.T. NAGAR PUBLIC SCHOOL**<br>R.T. Nagar, Bengaluru-32 | 1998 | Nursery & High School<br>(ICSE Syllabus) |
| 4. | **R.T. NAGAR TRUST HIGH SCHOOL**<br>Kanakanagar, Bengaluru-64 | 2005 | High School<br>(State Board) |
| 5. | **R.T. NAGAR SCHOOL OF NURSING**<br>Ganganagar, Bengaluru-32 | 2006 | Diploma in Midwifery<br>(Nursing) |
| 6. | **R.T. N.E.T. PUBLIC SCHOOL**<br>Singanayakanahally<br>Yelahanka Hobli, Bengaluru-64 | 2007 | Nursery to High School<br>(ICSE Syllabus) |
| 7. | **R.T. NAGAR PRE-UNIVERSITY COLLEGE**<br>Singanayakanahally<br>Yelahanka Hobli, Bengaluru-64 | 2012 | PUC<br>Science & Commerce |
| 8. | **R.T.N. INTERNATIONAL SCHOOL**<br>Singanayakanahally,<br>Yelahanka Hobli, Bengaluru-64 | 2012 | NWAC<br>America (USA) |
| 9. | **R.T. NAGAR DEGREE COLLEGE**<br>Singanayakanahally<br>Yelahanka Hobli, Bengaluru-64 | 2015 | B.C.A., B.Com |
| 10. | **R.T. NAGAR PRE-University COLLEGE**<br>R.T. Nagar, Bengaluru - 32 | 2022 | PUC<br>Science, Commerce & Arts |

**Lion B.R. Prasanna Kumar**
M.A., B.Ed.,
Chairman

**Lion B.P. Mohan Kumar**
B.B.M., M.B.A. (London), B.Ed.
Vice - Principal

**G. Manjula Devi**
General Secretary



# ಜಿಲ್ಲಾ ವಾರ್ತೆಗಳು

## ಬೆಳಗಾವಿ

ಏಪ್ರಿಲ್ 27 ರಂದು ನಿಪ್ಪಾಣಿ ನಗರದ ಕೆ.ಎಲ್.ಇ.ಕೆ.ಜಿ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬೇಸಿಗೆ ಶಿಬಿರದ ಕೊನೆಯ ದಿನ ಸರ್ವಧರ್ಮ ಪ್ರಾರ್ಥನೆ ಹಾಗೂ ಸಮಾರೋಪ ಸಮಾರಂಭವು ಶಾಲೆಯ ಕ್ರೀಡಾ ಸಭಾ ಭವನದಲ್ಲಿ ನಡೆಯಿತು. ಸರ್ವಧರ್ಮ ಪ್ರಾರ್ಥನೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ರೇವತಿ ಮಠದ, ಶಾಲೆಯ ಪ್ರಾಂಶುಪಾಲರು ಶ್ರೀ ಪಿ.ಐ. ಪಾಟೀಲ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಟಿ.ಬಿ. ಲೋಕರೆ, ಸ್ಕೌಟ್ ಮಾಸ್ಟರ್ ಶ್ರೀ ಬಸವರಾಜ ಕುಂಬಾರ, ಗೈಡ್ ಕ್ಯಾಪ್ಟನ್ ಶ್ರೀಮತಿ ಮಂಜುಳಾ ಬಾಣಿ, ಬನ್ನಿ ಆಂಟಿಗಳು ಭಾಗವಹಿಸಿದ್ದರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ಸ್ಕೌಟ್ ಮತ್ತು ಗೈಡ್ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ 30 ಸ್ಕೌಟ್ ಮಕ್ಕಳು, 30 ಗೈಡ್ ಮಕ್ಕಳು ಭಾಗವಹಿಸಿದ್ದರು.





## ಬೆಂಗಳೂರು ದಕ್ಷಿಣ

ಮಾರ್ಚ್ ಮತ್ತು ಏಪ್ರಿಲ್ ತಿಂಗಳನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ಸ್ಥಳಿಯ ಸಂಸ್ಥೆಯವಾರು ದಳಗಳ ಮಟ್ಟದಲ್ಲಿ ಕಬ್ಸ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆಯನ್ನು ಮಾಡಲಾಗಿತ್ತು. ಜಿಲ್ಲೆಯ 33 ಶಾಲೆಯ 95 ದಳಮಟ್ಟದಲ್ಲಿ 2673 ಶಿಬಿರಾರ್ಥಿಗಳು ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದಾರೆ.




* ಬೆಂಗಳೂರು ದಕ್ಷಿಣ ಜಿಲ್ಲೆ ಸ್ಥಳೀಯ ಮಟ್ಟದಲ್ಲಿ ಏಪ್ರಿಲ್ 14 ರಂದು ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಬೇಸಿಗೆ ಶಿಬಿರದಲ್ಲಿ ಆಯೋಜನೆ ಮಾಡಲಾಯಿತು.



* ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಏಪ್ರಿಲ್ 16 ರಿಂದ 20ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2022-23ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂದ್ಯಾ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ



ಮಕ್ಕಳನ್ನು ಉದ್ದೇಶಿ ಮಾತನಾಡಿದರು. ತೃತೀಯ ಸೋಪಾನ ಸ್ಕೌಟ್ಸ್ ವಿಭಾಕ್ಕೆ ಶ್ರೀ ಸಿದ್ದಗಂಗಯ್ಯ ಫ್ರೀ-ಎಎಲ್‌ಟಿ (ಸ್ಕೌ) ನಾಯಕರಾಗಿದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಗಾಯತ್ರಿ ಎ.ಎಲ್.ಟಿ. (ಗೈ) ನಾಯಕರಾಗಿದರು. ರಾಜ್ಯ ಪುರಸ್ಕಾರ ಪೂರ್ವಸಿದ್ದತಾ ಶಿಬಿರಕ್ಕೆ ಶ್ರೀ ಜಿ. ಸತೀಶ್ ನಾಯಕರಾಗಿದರು. ಶ್ರೀಮತಿ ರೇವತಿ ಎ.ಎಲ್.ಟಿ. (ಗೈ) ಗೈಡ್ ವಿಭಾಗಕ್ಕೆ ನಾಯಕಿರಾಗಿದರು. ಶಿಬಿರಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ. (ಸ್ಕೌ) ಶಿಬಿರದ ನಿರ್ದೇಶಕರಾಗಿದರು. ಶಿಬಿರಕ್ಕೆ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಗಾಯತ್ರಿ ಗೌಡ ಎಲ್.ಟಿ.(ಗೈ) ಬೇಟಿ ನೀಡಿದರು. ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ, ದಳನಾಯಕ-ನಾಯಕಿಯರು, ಸ್ಕೌಟ್ಸ್-ಗೈಡ್ಸ್‌ಗಳು, ಸೇವಾ ರೋವರ್ಸ್-ರೇಂಜರ್ಸ್ ಸೇರಿ ಒಟ್ಟು 625 ಜನ ಶಿಬಿರದಲ್ಲಿ ಭಾಗವಹಿಸಿದರು.



* ಮೇ 2 ರಿಂದ 5ರ ವರಗೆ ಕೆ.ಕೆ. ಇಂಗ್ಲೀಷ್ ಶಾಲೆ ವರ್ತೂರಿನಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಬೇಸಿಗೆ ಶಿಬಿರಕ್ಕೆ ಶ್ರೀಮತಿ ಮಮತಾ ಹೆಚ್.ಡಬ್ಲ್ಯೂ.ಬಿ. (ಗೈಡ್) ನಾಯಕಿಯಾಗಿದ್ದರು. ಸರ್ವಧರ್ಮ ಪ್ರಾರ್ಥನೆಯೊಂದಿಗೆ ಬೇಸಿಗೆ ಶಿಬಿರವನ್ನು ಮುಕ್ತಯಗೊಳಿಸಲಾಯಿತ್ತು. ಈ ಶಿಬಿರದಲ್ಲಿ 48 ಸ್ಕೌಟ್ಸ್ – 52 ಗೈಡ್ಸ್ ದಳ ನಾಯಕರು 4 ಒಟ್ಟು 104 ಭಾಗವಹಿಸಿದರು.



* ಮೇ 2 ರಿಂದ 8ರ ವರೆಗೆ ಜಿಲ್ಲಾ ಮಟ್ಟದ ಮೂಲತರಬೇತಿ ಶಿಬಿರವನ್ನು ಕೆ.ಕೆ. ಇಂಗ್ಲೀಷ್ ಶಾಲೆ ವರ್ತೂರಿನಲ್ಲಿ ಆಯೋಜನೆ ಮಾಡಲಾಯಿತು. ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಜೆ. ಚಕ್ರವರ್ತಿ, ಎಲ್.ಟಿ. (ಸ್ಕೌ) ನಾಯಕರಾಗಿದರು, 09 ಶಿಬಿರಾರ್ಥಿಗಳು ಭಾಗವಹಿಸಿದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ರೇವತಿ, ಎ.ಎಲ್.ಟಿ. (ಗೈ) ನಾಯಕರಾಗಿದರು, 10 ಶಿಬಿರಾರ್ಥಿಗಳು ಭಾಗವಹಿಸಿದರು. ಶ್ರೀ ಮೇರಿ ಫಿಲೋಮಿನಾ, ಎಲ್.ಟಿ. (ಫ್ಲಾಕ್) ನಾಯಕಿಯಾಗಿದ್ದರು. 09 ಶಿಬಿರಾರ್ಥಿಗಳು ಭಾಗವಹಿಸಿದರು. ಫ್ಲಾಕ್ ಲೀಡರ್ ತರಬೇತಿಗೆ ಶಿಬಿರಗಳು ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ. (ಸ್ಕೌಟ್ಸ್) ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಜೀತೇಶ್ ರಾಷ್ಟ್ರೀಯ ಆಯುಕ್ತರು (ರೋವರ್ಸ್) ಹಾಗೂ ವೈಟ್‌ಫೀಲ್ಡ್ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳು ಇವರ ಮಾರ್ಗದರ್ಶನದಲ್ಲಿ ನಡೆಯಿತು. ಶ್ರೀ ಎಂ.ಎ. ಖಾಲೀದ್, ಹೆಚ್ಚುವರಿ ಮುಖ್ಯ ರಾಷ್ಟ್ರೀಯ ಆಯುಕ್ತರು ಹಾಗೂ ರಾಜ್ಯ ಆಯುಕ್ತರು (ಸ್ಕೌ) ಮೂಲತರಬೇತಿ ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಆಗಮಿಸಿ ಶಿಬಿರಾರ್ಥಿಗಳಿಗೆ ಶುಭ ಕೋರಿದರು. ಈ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀ ಗಾಯತ್ರಿ ಗೌಡ, ಎಲ್.ಟಿ. (ಗೈ) ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ, ಶ್ರೀ ಆನಂದ್ .ಎನ್., ಜಯನಗರ ಸ್ಥಳಿಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೇರ್‌ಮನ್ ಹಾಗೂ ರಾಜ್ಯ ಆಜೀವ ಸದ್ಯಸರು ಬೇಟಿ ನೀಡಿ ಶಿಬಿರಾರ್ಥಿಗಳಿಗೆ ಶುಭ ಕೋರಿದರು.









## ಬೆಂಗಳೂರು ಉತ್ತರ

2023ರ ವಿಧಾನಸಭಾ ಚುನಾವಣೆ ಸೇವಾ ಶಿಬಿರ ಮೇ 10ರಂದು ನಡೆದ ವಿಧಾನಸಬಾ ಚುನಾವಣೆಯಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್ ಕರ್ನಾಟಕ ಬೆಂಗಳೂರು ಉತ್ತರಜಿಲ್ಲೆ ವತಿಯಿಂದ ಬೆಂಗಳೂರು ನಗರ ವಲಯದ ಮುಖ್ಯವಾಗಿ ರಾಜಾಜಿನಗರ, ಚಾಮರಾಜಪೇಟೆ ಇಲ್ಲಿನ ಒಟ್ಟು ಸುಮಾರು 75 ಚುನಾವಣೆ ಕೇಂದ್ರ್ರದಲ್ಲಿ ಪೂರ್ವಾಹ್ನ 6 ರಿಂದ ಸಂಜೆ 6ರ ವರೆಗೆ ರೊವರ್–ರೇಂಜರ್ಸ್ ವತಿಯಿಂದ ಸೇವೆ ಸಲ್ಲಿಸಲಾಯಿತು. ರೋವರ್–ರೇಂಜರ್ ಸೇವೆಯನ್ನು ಚುನಾವಣೆಯ ಅಧಿಕಾರಿಗಳು ಮುಕ್ತ ಕಂಠದಲ್ಲಿ ಶ್ಲಾಘಿಸಿದರು.



* ಗೈಡ್ಸ್ ನಡಿಗೆ ಹಳ್ಳಿ ಕಡೆಗೆ, ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 11ನೇ ತಿಂಗಳ ಕಾರ್ಯಕ್ರಮ ಏಪ್ರಿಲ್ 28ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರಿನಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಲಿಸಲಾಯಿತು. ಕಾರ್ಯಕ್ರಮಕ್ಕೆ ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 52 ಮಂದಿ ಭಾಗವಹಿಸಿದ್ದರು.





## ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ವತಿಯಿಂದ ಏಪ್ರಿಲ್ 29 ರಿಂದ ಮೇ 01 ರವರೆಗೆ ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ 2022–23ನೇ ಸಾಲಿನ ನಿಪುನ್ ರೋವರ್ಸ್ ಮತ್ತು ರೇಂಜರ್ಸ್ ಪರೀಕ್ಷಾ ಶಿಬಿರವು ನಡೆಯಿತು. ರೋವರ್ ವಿಭಾಗದಲ್ಲಿ ನಾಯಕರಾಗಿ ಶ್ರೀ ಪ್ರತೀಮ್ ಕುಮಾರ್ ಎ.ಎಲ್.ಟಿ. (ಆರ್.ಎಸ್.ಎಲ್.) ರೇಂಜರ್ ವಿಭಾಗದಲ್ಲಿ ನಾಯಕಿಯಾಗಿ ಶ್ರೀಮತಿ ದಿವ್ಯ, ಫ್ರೀ.ಎ.ಎಲ್.ಟಿ. (ಆರ್.ಎಲ್.) ಕಾರ್ಯನಿರ್ವಸಿದರು. ಶಿಬಿರದಲ್ಲಿ ರೋವರ್ ವಿಭಾಗದಲ್ಲಿ 35 ಹಾಗೂ ರೇಂಜರ್ ವಿಭಾಗದಲ್ಲಿ 107 ಒಟ್ಟು 142 ವಿದ್ಯಾರ್ಥಿಗಳು ಭಾಗವಹಿಸಿದರು. ವಿವೇಕಾನಂದ ಕಾಲೇಜು ಪುತ್ತೂರಿನ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.



* ಮೇ 08 ರಂದು ದಕ್ಷಿಣ ಕನ್ನಡ ಸ್ವೀಪ್ ಸಮಿತಿ ಚುನಾವಣಾ ಆಯೋಗ ಹಮ್ಮಿಕೊಂಡ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಡೊಂಬಯ್ಯ ಇಡ್ಕಿದು ಇವರ ಮಾರ್ಗದರ್ಶದಲ್ಲಿ ಕೆನರಾ ಕಾಲೇಜು ಮಂಗಳೂರು ಮತ್ತು ಬೆಸೆಂಟ್ ಮಹಿಳಾ ಪದವಿ ಕಾಲೇಜಿನ ರೋವರ್ ಹಾಗೂ ರೇಂಜರ್‌ಗಳು ಭಾಗವಹಿಸಿದ್ದರು.



## ದಾವಣಗೆರೆ

ಏಪ್ರಿಲ್ 16 ರಿಂದ 19 ರವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ತೃತೀಯ ಸೋಪಾನ ಮತ್ತು ರಾಜ್ಯಪುರಸ್ಕಾರ ಪೂರ್ವಭಾವಿ ಪರೀಕ್ಷಾ ಶಿಬಿರ, ಬೇಸಿಗೆ ಶಿಬಿರ ಮತ್ತು ಚಾರಣ ಶಿಬಿರವನ್ನು ದಾಂಡೇಲಿಯಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಹಾಗೂ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಕಾರ್ಯನಿರ್ವಹಿಸಿದರು. ತರಳಬಾಳು ಶಾಲೆ, ಸೆಂಟ್‌ಪಾಲ್ಸ್ ಕಾನ್ವೆಂಟ್, ಮಾಗನೂರು ಬಸಪ್ಪ ಶಾಲೆ, ಪಟೇಲ್ ವೀರಭದ್ರಪ್ಪ ಶಾಲೆ, ಬಾಪೂಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಮದರ್ ತೆರೆಸಾ ಓಪನ್ ಗೈಡ್ ಕಂಪನಿಯ ಸುಮಾರು 150 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು.





* ಏಪ್ರಿಲ್ 26 ರಿಂದ 29 ರವರೆಗೆ ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಚೇತನ ಗೈಡ್ ಕಂಪನಿ ವತಿಯಿಂದ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು.

* ಏಪ್ರಿಲ್ 28 ರಂದು ಹರಿಹರ ಸ್ಥಳೀಯ ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮತದಾನ ಜಾಗೃತಿ ಜಾಥಾವನ್ನು ಆಯೋಜಿಸಲಾಗಿತ್ತು. ಶ್ರೀ ವಿರೂಪಾಕ್ಷಪ್ಪ, ಪ್ರಾಂಶುಪಾಲರು ಜಾಥಾಕ್ಕೆ ಚಾಲನೆ ನೀಡಿದರು. ರೋವರ್ ಸ್ಕೌಟ್ ಲೀಡರ್‌ಗಳಾದ ಶ್ರೀ ಸುರೇಶ್ ವಿ. ಮತ್ತು ಶ್ರೀ ಮಂಜುನಾಥ್, ರೇಂಜರ್ ಲೀಡರ್ ಶ್ರೀಮತಿ ದ್ರಾಕ್ಷಾಯಿಣಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಪ್ರಭಾಕರ್, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶ್ರೀ ದೀಪಕ್ ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.




* ಮೇ 04 ರಂದು ಶ್ರೀ ತರಳಬಾಳು ಶಾಲೆ, ಬಸಾಪುರ ಇಲ್ಲಿ ಬೇಸಿಗೆ ಶಿಬಿರವನ್ನು ಶ್ರೀ ಶಿವಕುಮಾರ, ಮುಖ್ಯೋಪಾಧ್ಯಾಯರು ಉದ್ಘಾಟಿಸಿದರು. ಮೇ 05 ರಂದು ಬುದ್ಧ ಪೂರ್ಣಿಮ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಮತ್ತು ಶ್ರೀ ಮುಸ್ತಫ, ಯುವ ಸಮಿತಿ ಸದಸ್ಯರು ಭಾಗವಹಿಸಿದ್ದರು. ಶಿಬಿರದ ನೇತೃತ್ವವನ್ನು ಶ್ರೀಮತಿ ಶ್ವೇತಾ ಮತ್ತು ಶ್ರೀಮತಿ ಆಶಾ ವಹಿಸಿದ್ದರು.

* ಮೇ 06 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಶಾಲೆ ಬಸಾಪುರ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳು ಹಳ್ಳಿಯ ಪ್ರತಿ ಮನೆ ಮನೆಗೂ ತೆರಳಿ ಸಾರ್ವಜನಿಕರಲ್ಲಿ ಮತದಾನ ಅಮೂಲ್ಯವಾದ ಹಕ್ಕು




ಎಂದು ಮನವರಿಕೆ ಮಾಡಿಕೊಟ್ಟರು. ಶ್ರೀ ಶಿವಕುಮಾರ್ ಮುಖ್ಯೋಪಾಧ್ಯಾಯರು, ಶ್ರೀಮತಿ ಶ್ವೇತಾ, ಶ್ರೀಮತಿ ಆಶಾ ಕಾರ್ಯಕ್ರಮದ ನೇತೃತ್ವವಹಿಸಿದ್ದರು.

* ಮೇ 08 ರಂದು ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್ ಮತ್ತು ರೇಂಜರ್ಸ್‌ಗಳ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ॥ ನಾರಾಯಣಸ್ವಾಮಿ ರೋವರ್ ಸ್ಕೌಟ್ ಲೀಡರ್ ಇವರ ಮಾರ್ಗದರ್ಶನದಲ್ಲಿ ಜಾಥಾ




ನಡೆಯಿತು. ಶ್ರೀ ಮುಸ್ತಫ ಯುವಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

* ಮೇ 09 ರಂದು ಚನ್ನಗಿರಿ ಸಂತೆಬೆನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಮತದಾನ ಆಂದೋಲನವನ್ನು ನಡೆಸಿ ಕಡ್ಡಾಯವಾಗಿ ಎಲ್ಲರೂ ಮತದಾನ ಮಾಡಬೇಕೆಂಬ ಸಂದೇಶ ಸಾರಿದರು.

* ಮೇ 14 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್ ಮತ್ತು ರೇಂಜರ್ಸ್‌ಗಳು ವಿಶ್ವ ತಾಯಂದಿರ ದಿನಾಚರಣೆಯನ್ನು ಆಚರಿಸಲಾಯಿತು.

## ಹಾಸನ

"ಮಕ್ಕಳು ಧೈರ್ಯ ಶಾಲಿಗಳಾಗಿ ಭವಿಷ್ಯವನ್ನು ರೂಪಿಸಿಕೊಳ್ಳಿ ಬೇರೆಯವರ ಗುಲಾಮರಾಗದೆ ನೀವೇ ನಾಯಕರಾಗಿ" ಎಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ತಿಳಿಸಿದರು, ಅವರು ನಗರದ ಲಕ್ಷ್ಮಿಪುರಂ ಬಡಾವಣೆಯಲ್ಲಿರುವ ಗ್ಯಾರಳ್ಳಿ ತಮ್ಮಯ್ಯ ವರ್ಲ್ಡ್ ಅಕಾಡೆಮಿಯ ಸದ್ಭಾವ ಸ್ಕೌಟ್ ಟ್ರೂಪ್ ಹಾಗೂ ಸಮರ್ಪಣಾ ಗೈಡ್ ಕಂಪನಿ ವತಿಯಿಂದ ಸ್ಕೌಟ್-ಗೈಡ್ಸ್ ಉಚಿತ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸ್ಕೌಟ್-ಗೈಡ್‌ನ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಪ್ರಿಯಾಂಕರವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಅಧಿಕಾರಿಯಾದ ಶ್ರೀಮತಿ ಭೂಮಿಕಾ, ಪ್ರಾಂಶುಪಾಲರಾದ ಶ್ರೀ ಸೂರ್ಯಕಾಂತ ನಾಯಕ್, ಗೈಡ್ ಕ್ಯಾಪ್ಟನ್ ಶ್ರೀಮತಿ ಅರ್ಶಿಯಾತರನ್ನವ್, ಸ್ಕೌಟ್ ಮಾಸ್ಟರ್ ಶ್ರೀ ತಿಮ್ಮರಾಜು ಹಾಗೂ ಇತರರು ಭಾಗವಹಿಸಿದ್ದರು.



* ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉತ್ತರ ಬಡಾವಣೆ ಇಲ್ಲಿ ಬೇಸಿಗೆ ಶಿಬಿರವನ್ನು ಶ್ರೀಮತಿ ವೈ.ಡಿ. ಪದ್ಮ, ಗೈಡ್ ಶಿಕ್ಷಕಿರವರ ನೇತೃತ್ವದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಹಾಗೂ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಆರ್.ಎ. ರಮೇಶ್ ಹಾಗೂ ಸಹಾಯಕ ರಾಜ್ಯ ಸಂಘಟನಾ ಆಯುಕ್ತರದ ಶ್ರೀಮತಿ ಪ್ರಿಯಾಂಕರವರು ಭೇಟಿ ನೀಡಿ ಮಕ್ಕಳಿಗೆ ನೀತಿ ಕಥೆಗಳನ್ನು ಹೇಳುವುದರ ಮೂಲಕ ಬೇಸಿಗೆ ಶಿಬಿರಕ್ಕೆ ಶುಭ ಹಾರೈಸಿದರು.



* ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ, ಮೂಡನಹಳ್ಳಿ ಕಬ್ ವಿದ್ಯಾರ್ಥಿಗಳಿಗೆ ಏಪ್ರಿಲ್ 10 ರಿಂದ 14 ರ ವರಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿದ್ದರು. ಶಿಬಿರದ ನಾಯಕತ್ವವನ್ನು ಶ್ರೀಮತಿ ಉಮಾ ಮಹೇಶ್ವರಪ್ಪರವರು ವಹಿಸಿಕೊಂಡಿದ್ದರು.

* ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆ ಕಸ್ತೂರಿ ಕೊಪ್ಪಲು ಅರಸೀಕೆರೆ ತಾಲೂಕಿನ ಕಬ್ ವಿದ್ಯಾರ್ಥಿಗಳಿಗೆ ಲೇಡಿ ಕಬ್ ಮಾಸ್ಟರ್ ಶ್ರೀ ಮಧು ಸುಮರವರು ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿದರು.

* ಬೇಲೂರು ತಾಲ್ಲೂಕು ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕ ಮೇದೂರಿನಲ್ಲಿ ಏಪ್ರಿಲ್ 12 ರಿಂದ 15ರ ವರಗೆ ಸ್ಕೌಟ್, ಗೈಡ್, ಕಬ್-ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿದ್ದರು. ಶಿಬಿರದ ನೇತೃತ್ವವನ್ನು ಸ್ಕೌಟ್ ಮಾಸ್ಟರ್ ಶ್ರೀ ಸಂದೀಪ್ ಹಾಗೂ ಕಬ್ ಮಾಸ್ಟರ್ ಶ್ರೀ ಪರಶುರಾಮಪ್ಪ ರವರು ವಹಿಸಿಕೊಂಡಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ರಹಮತ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು ಹಾಗೂ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಿ ಶುಭಾಶಯಗಳನ್ನು ತಿಳಿಸಿದರು.

* ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ, ಬಾಣಾವರ, ಅರಸೀಕೆರೆ ತಾಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಏಪ್ರಿಲ್ 04 ರಿಂದ 07ರ ವರಗೆ ಬೇಸಿಗೆ ಶಿಬಿರವನ್ನು ಮಾಡಿರುತ್ತಾರೆ. ಬೇಸಿಗೆ ಶಿಬಿರದ ಉಸ್ತುವಾರಿಯನ್ನು ಸ್ಕೌಟ್ ಮಾಸ್ಟರ್ ಶ್ರೀ ಸತೀಶ್‌ರವರು ವಹಿಸಿಕೊಂಡಿರುತ್ತಾರೆ.

* ರೋಟರಿ ಆಂಗ್ಲ ಮಾಧ್ಯಮ ಶಾಲೆ, ಬೇಲೂರು ತಾಲೂಕು ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳ ಬೇಸಿಗೆ ಶಿಬಿರವನ್ನು ಮಾಡಿರುತ್ತಾರೆ. ಶಿಬಿರದ ನಾಯಕತ್ವವನ್ನು ಗೈಡ್ ಶಿಕ್ಷಕಿ ಶ್ರೀಮತಿ ವಾಣಿರವರು ವಹಿಸಿಕೊಂಡಿದ್ದರು.

* ಮೌಂಟ್ ಕಾರ್ಮಲ್ ಶಾಲೆಯ ಕಬ್ ವಿದ್ಯಾರ್ಥಿಗಳಿಗೆ ಏಪ್ರಿಲ್ 10 ರಿಂದ 14ರ ವರಗೆ ಬೇಸಿಗೆ ಶಿಬಿರವನ್ನು ಮಾಡಿದರು.

* ಹಾಸನ ಜಿಲ್ಲಾ ಸಂಸ್ಥೆ, ಹಾಸನ ತಾಲ್ಲೂಕು ಸಂಸ್ಥೆಯ ಸಂಯುಕ್ತಶ್ರಯದಲ್ಲಿ ಏಪ್ರಿಲ್ 11 ರಿಂದ 15ರ ವರಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರ ಮಾರ್ಗದರ್ಶನದಲ್ಲಿ ಶಿಬಿರ ಯಶಸ್ವಿಯಾಗಿ ನಡೆಯಿತು. ಶಿಬಿರದ ಉಸ್ತುವಾರಿಯನ್ನು ತಾಲೂಕು ಕಾರ್ಯದರ್ಶಿ ಶ್ರೀಮತಿ ಬಿ.ಎಸ್. ವನಜಾಕ್ಷಿ ರವರು ವಹಿಸಿದ್ದರು.

* ಹಳೇಬೀಡಿನ ಎಸ್.ಜಿ. ಪಬ್ಲಿಕ್ ಸ್ಕೂಲ್‌ನಲ್ಲಿ ಏಪ್ರಿಲ್ 13 ರಿಂದ 15ರ ವರೆಗೆ ಗೈಡ್ ನಾಯಕಿ ಶ್ರೀಮತಿ ಬಿ.ಎಲ್. ಮಮತರವರ ನೇತೃತ್ವದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು.



ಇದೇ ಸಂದರ್ಭದಲ್ಲಿ ಏಪ್ರಿಲ್ 14 ರಂದು ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

* ಹಾಸನ ಜಿಲ್ಲಾ ಸಂಸ್ಥೆ ಮತ್ತು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 17 ರಿಂದ 18ರ ವರಗೆ ಜಿಲ್ಲಾ ಸ್ಕೌಟ್ ಭವನದಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ಉಸ್ತುವಾರಿಯನ್ನು ಶ್ರೀಮತಿ ಕೆ.ಸಿ. ಗೀತಾರವರು ವಹಿಸಿಕೊಂಡಿದ್ದರು. ಶಿಬಿರದಲ್ಲಿ ಡಾ|| ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ, ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಆರ್. ಗಿರಿಶ್, ಆಲೂರು ತಾಲೂಕು ಕಾರ್ಯದರ್ಶಿ ಹಾಗೂ ಕೇಂದ್ರ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಹಾಸನ ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ವನಜಾಕ್ಷಿ ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ ಉಪಸ್ಥಿತರಿದ್ದರು.




* ಹೊಳೆನರಸೀಪುರ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೇಂಜರ್‌ಗಳು ಏಪ್ರಿಲ್ 19 ರಂದು ನಗರದ ಪ್ರಮುಖ ಬೀದಿಗಳಲ್ಲಿ ಮತದಾನ ಜಾಗೃತಿಯ ವಿಷಯವಾಗಿ ಬೀದಿ ನಾಟಕವನ್ನು ಮಾಡುವುದರ ಮೂಲಕ ಮತದಾನ ಜಾಗೃತಿಯನ್ನು ಮೂಡಿಸಿರುತ್ತಾರೆ ಈ ಸಂಧರ್ಭದಲ್ಲಿ ತಾಲೂಕು ಕಾರ್ಯದರ್ಶಿ ಶ್ರೀಮತಿ ಕುಮುದ ಹಾಗೂ ಪುರಸಭೆಯ ಕಂದಾಯಾಧಿಕಾರಿ ಶ್ರೀ ನಾಗೇಂದ್ರ ಕುಮಾರ್ ಭಾಗವಹಿಸಿದರು.

* ನಾಗಶ್ರೀ ಶಾಲೆ ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಏಪ್ರಿಲ್ 17 ರಿಂದ 20ರ ವರಗೆ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಶಿಬಿರ ನಡೆದ ಸ್ಥಳಕ್ಕೆ ಜಿಲ್ಲಾ ಮುಖ್ಯ ಆಯುಕ್ತರು ಡಾ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಭೇಟಿ ನೀಡಿ ಉಪಯುಕ್ತವಾದ ಮಾಹಿತಿಯನ್ನು



ನೀಡಿದರು. ಈ ಸಂಧರ್ಭದಲ್ಲಿ ಶಾಲಾ ಮುಖ್ಯಸ್ಥರು ಶ್ರೀಮತಿ ನಾಜಿಯ ಬಾನು, ಸ್ಕೌಟ್ ಮಾಸ್ಟರ್ ಶ್ರೀ ತಾಂಡವಮೂರ್ತಿ ಉಪಸ್ಥಿತರಿದರು.

* ಸಕಲೇಪುರ ತಾಲ್ಲೂಕು ಸಂಸ್ಥೆಯ ಸಂತ ಜೋಸೆಫರ ಪ್ರೌಢ ಶಾಲೆಯಲ್ಲಿ ಮಾರ್ಚ್ 28 ರಿಂದ 01ರ ವರೆಗೆ ಬೇಸಿಗೆ ಶಿಬಿರವನ್ನು ಶಾಲಾ ಆವರಣದಲ್ಲಿ ಮಾಡಲಾಯಿತು.

## ಕಾರವಾರ (ಉ.ಕ.)

ಏಪ್ರಿಲ್ 16 ರಂದು ಹೊನ್ನಾವರದ ನ್ಯೂ ಎಜುಕೇಶನ್ ಸೊಸೈಟಿಯಿಂದ ಹೊನ್ನಾವರದಲ್ಲಿ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮವು ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಪಂಚಾಯತ್ ಪಟ್ಟಣ ಪಂಚಾಯತ್ ಸಹಯೋಗದೊಂದಿಗೆ ನಡೆಸಲಾಯಿತು. ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.




* ಏಪ್ರಿಲ್ 17 ರಂದು ಕುಮಟಾದ ಅಘನಾಶಿನಿಯಲ್ಲಿ ಬೇಸಿಗೆ ಶಿಬಿರವು ಕಿರಿಯ ಪ್ರಾಥಮಿಕ ಶಾಲೆ ಹಾಗೂ ಹಿರಿಯ ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಶ್ರೀ ಕೆ.ಪಿ. ಭಂಡಾರಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀಮತಿ ಬೇಬಿ ಪಡಿಯಾರ್ಡಿ ಟಿ.ಸಿ.(ಗೈ) ಇವರ ನಾಯಕತ್ವದಲ್ಲಿ ನಡೆಯಿತು. ಸುಮಾರು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಾಲ್ಕು ದಿನಗಳ ಕಾಲ ಈ ಬೇಸಿಗೆ ಶಿಬಿರವನ್ನು ನಡೆಸಲಾಯಿತು.

* ಏಪ್ರಿಲ್ 18 ರಂದು ಜನತಾ ವಿದ್ಯಾಲಯ ಪ್ರೌಢಶಾಲೆ ಮಿರ್ಜಾನ್ ಇಲ್ಲಿ ಶಿಕ್ಷಕ ಶ್ರೀ ರಾಜು ರಾಮ ನಾಯ್ಕ ಇವರ ಸಂಘಟನೆಯಲ್ಲಿ ಬೇಸಿಗೆ ಶಿಬಿರ ನಡೆಯಿತು. ಮತದಾನ ಜಾಗೃತಿ, ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ ಎಂಬ ಘೋಷ ವಾಕ್ಯದೊಂದಿಗೆ ಮಿರ್ಜಾನ್ ಕೋಟೆ ಸುತ್ತಮುತ್ತ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯವರು ಸಹಕರಿಸಿದರು. ಅಭಿಯಾನಕ್ಕೆ ಕೋಟೆಯ ಮೇಲ್ವಿಚಾರಕರು ಶ್ರೀ ಸೋಲಂಕಿಯವರು ಸಹಕರಿಸಿ ಪ್ರೋತ್ಸಾಹಿಸಿದರು.

* ಏಪ್ರಿಲ್ 19 ರಿಂದ ಹೊನ್ನಾವರದ ನ್ಯೂ ಇಂಗ್ಲಿಷ್ ಶಾಲೆಯಲ್ಲಿ ನಾಲ್ಕು ದಿನಗಳ ಕಾಲ ಬೇಸಿಗೆ ಶಿಬಿರವನ್ನು ನಡೆಸಲಾಯಿತು.

* ಏಪ್ರಿಲ್ 20 ರಿಂದ ಕಾತ್ಯಾಯನಿ ಪ್ರೌಢಶಾಲೆ ಅವರ್ಸ ಅಂಕೋಲದಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮವು ಮೂರು ದಿನಗಳ ಕಾಲ ನಡೆಯಿತು. ಶ್ರೀ ವಿನಾಯಕ್ ನಾಯಕ್ ಸ್ಕೌಟ್ ಮಾಸ್ಟರ್ ಕಾರ್ಯಕ್ರಮವನ್ನು ಆಯೋಜಿಸಿದ್ದರು. ವಿದ್ಯಾರ್ಥಿಗಳಿಗೆ ಶಿಬಿರ ಕೌಶಲ್ಯಗಳನ್ನು ಕಲಿಸಲಾಯಿತು.

* ಏಪ್ರಿಲ್ 21 ರಿಂದ 24ರ ವರೆಗೆ ಹಳದೀಪುರ ಅಗ್ರಹಾರದದಲ್ಲಿ ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ, ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಶೋಭಾ ಕುಲಕರ್ಣಿ ಹಾಗೂ ದಳ ನಾಯಕರಾದ ಶ್ರೀ ಜಿ.ಆರ್. ಮಡಿವಾಳ ಇವರು ಸುಭಾಷ್ ಮುಕ್ತ ಸ್ಕೌಟ್ ದಳದ ವತಿಯಿಂದ ನಾಲ್ಕು ದಿನಗಳ ಕಾಲ ಬೇಸಿಗೆ ಶಿಬಿರವನ್ನು ನಡೆಸಲಾಯಿತು.

* ಏಪ್ರಿಲ್ 30 ರಂದು ಹೊನ್ನಾವರದಲ್ಲಿ ಮತದಾನ ಜಾಗೃತಿ ಕಾರ್ಯಕ್ರಮವನ್ನು ತಾಲ್ಲೂಕು ಆಡಳಿತದ ಸಹಯೋಗದೊಂದಿಗೆ ನಡೆಸಿದ್ದು ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.

* ಮೇ 03 ರಂದು 2ನೇ ಹಂತದ ಸ್ಕೌಟ್–ಗೈಡ್ ಬೇಸಿಗೆ ಶಿಬಿರವನ್ನು ಅಗ್ರಹಾರದ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆಸಲಾಯಿತು. 3 ದಿನಗಳವರೆಗೆ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಶಿಬಿರಾರ್ಥಿಗಳಿಗೆ ನೋಟ್‌ಬುಕ್ ಮತ್ತು ಪೆನ್ ವಿತರಣೆ ಮಾಡಿದರು. ಶ್ರೀಮತಿ ಶೋಭ ಕುಲಕರ್ಣಿ ಜಿಲ್ಲಾ ಆಯುಕ್ತರು ಸಿಹಿ ವಿತರಿಸಿ ಮಾತನಾಡಿದರು. ಜಿಲ್ಲಾ ಕೋಶಾಧಿಕಾರಿ ಶ್ರೀ ಜಿ.ಆರ್. ಮಡಿವಾಳ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀ ಕರಿಸಿದ್ದಪ್ಪ, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಮತಿ ವನಿತಾ ನಾಯ್ಕ, ಪಾಲಕರು ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

* ಮಾರ್ಚ್ 25 ರಿಂದ ಆರಂಭಗೊಂಡ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕಿನ ಸ್ಕೌಟ್–ಗೈಡ್ ಶಿಕ್ಷಕರು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

* ಕುಮಟಾ ತಾಲ್ಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಂತೆಗದ್ದೆಯಲ್ಲಿ ಏಪ್ರಿಲ್ 01 ರಿಂದ 06ರ ವರೆಗೆ ಚಿಣ್ಣರ ಬೇಸಿಗೆ ಶಿಬಿರ ನಡೆಯಿತು.




* ಏಪ್ರಿಲ್ 1 ರಂದು ಹೆಚ್.ಪಿ.ಎಸ್. ಹೊನ್ನಕೆರೆ ಕುಮಟಾದಲ್ಲಿ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಏಪ್ರಿಲ್ 3 ರಂದು ಸರಕಾರಿ ಕನ್ನಡ ಹಿರಿಯ ಸರಕಾರಿ ಶಾಲೆ ಪುರವರ್ಗ ಭಟ್ಕಳದಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮ ಆರಂಭಗೊಂಡಿತು.

* ಏಪ್ರಿಲ್ 8 ರಂದು ಹೆಚ್.ಪಿ.ಎಸ್. ಕುಂಬಾರಮಕ್ಕಿ ಮಂಕಿ, ಮಾದರಿ ಹಿರಿಯ ಪ್ರಾಥಮಿಕ ಶಾಲೆ ಖರ್ವಾ, ಶ್ರೀ ಮಂಜುನಾಥಸ್ವಾಮಿ ಪ್ರೌಢಶಾಲೆ, ಬೆಳಂಬಾರ ಅಂಕೋಲಾದ ಶಾಲೆಯಲ್ಲಿ ಬೇಸಿಗೆ ಶಿಬಿರ ಆರಂಭಿಸಲಾಯಿತು. ಏಪ್ರಿಲ್ 9 ರಂದು ಕುಮಟಾದ ಅಘನಾಶಿನಿ ಪ್ರೌಢಶಾಲೆಯಲ್ಲಿ ಬೇಸಿಗೆ ಶಿಬಿರ ಆರಂಭಗೊಂಡಿತು.

* ಏಪ್ರಿಲ್ 11 ರಂದು ಸ್ಥಳೀಯ ಸಂಸ್ಥೆ ಭಟ್ಕಳ ಇದರ ವತಿಯಿಂದ ಬೇಸಿಗೆ ಶಿಬಿರ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ಶ್ರೀ ನಾರಾಯಣ ದೈಮನೆ, ಧರ್ಮದರ್ಶಿಗಳು, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಅಳ್ವೆಕೋಡಿ. ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ತಿಮ್ಮಪ್ಪ ಹೊನ್ನಿಮನೆ, ಅಧ್ಯಕ್ಷರು, ಶ್ರೀ ದುರ್ಗಾದೇವಿ ಚಾರಿಟೇಬಲ್ ಟ್ರಸ್ಟ್ ಅಳ್ವೆಕೋಡಿ. ಇವರು ಉದ್ಘಾಟಿಸಿದರು. ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಶೋಭಾ ಕುಲಕರ್ಣಿ, ಆಯುಕ್ತರು (ಗೈಡ್) ಮತ್ತು ಶ್ರೀ ಅರವಿಂದ ಪೈ ಇವರು ಅತಿಥಿಗಳಾಗಿ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವೆಂಕಟೇಶ ಗುಬ್ಬಿಹಿತ್ತಲ ಸ್ವಾಗತಿಸಿದರು. ಶ್ರೀ ಕೇಶವ ಮೊಗೇರ ಅಳ್ವೆಕೋಡಿ ವಂದಿಸಿದರು. ಶ್ರೀಮತಿ ರಾಜೀವಿ ಮೊಗೇರ ಕಾರ್ಯಕ್ರಮ ನಿರೂಪಿಸಿದರು.




* ಏಪ್ರಿಲ್ 11 ರಂದು ಸರ್ಕಾರಿ ಪ್ರೌಢಶಾಲೆ ಹುಲಗೇರಿ ಅಂಕೋಲಾ, ಕಾತ್ಯಾಯನಿ ಪ್ರೌಢಶಾಲೆ, ಅಮೃತಾ ವಿದ್ಯಾಲಯ ಕಾರವಾರ, ಉರ್ದು ಹಿರಿಯ ಪ್ರಾಥಮಿಕ ಶಾಲೆ ಚಿತ್ತಾಕುಲ ಕಾರವಾರದಲ್ಲಿ ಬೇಸಿಗೆ ಶಿಬಿರ ಆರಂಭಗೊಂಡಿತು.

* ಏಪ್ರಿಲ್ 11 ರಂದು ಹೊನ್ನಾವರದ ಮಾರ್ಥೋಮಾ ಶಾಲೆಯಲ್ಲಿ ಕಬ್–ಬುಲ್‌ಬುಲ್, ಸ್ಕೌಟ್–ಗೈಡ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ ನಡೆಯಿತು.



* ಏಪ್ರಿಲ್ 12 ರಂದು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪಟ್ಟಣ ಹೊನ್ನಾವರದಲ್ಲಿ. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಾವಿನಕುರ್ವಾ ಬೇಸಿಗೆ ಶಿಬಿರ ಕಾರ್ಯಕ್ರಮ ನಡೆಯಿತು.

* ಸ್ಥಳೀಯ ಸಂಸ್ಥೆ ಹೊನ್ನಾವರ ನ್ಯೂ ಇಂಗ್ಲೀಷ್ ಸ್ಕೂಲ್ ಶಾಲೆಯ ಸುಭಾಷ್ ಚಂದ್ರ ಬೋಸ್ ಸ್ಕೌಟ್ ಟ್ರೂಪ್ ಮತ್ತು ಝಾನ್ಸಿ ಲಕ್ಷ್ಮೀಬಾಯಿ ಗೈಡ್ಸ್ ಕಂಪನಿ ಇದರ ಆಶ್ರಯದಲ್ಲಿ ಏಪ್ರಿಲ್ 11 ರಿಂದ 14ರ ವರೆಗೆ ಸ್ಕೌಟ್ ಮತ್ತು ಗೈಡ್ಸ್ ಬೇಸಿಗೆ ಶಿಬಿರ ನಡೆಯಿತು. ಏಪ್ರಿಲ್ 13 ರಂದು ಬೆಳಿಗ್ಗೆ ಒಂಬತ್ತು ಗಂಟೆಗೆ ಗೇರಸಪ್ಪದ ನಗರಬಸ್ತಿಗೆ ಹೊರಸಂಚಾರ ನಡೆಸಿ. ಅಲ್ಲಿನ ಸುತ್ತಮುತ್ತಲಿನ ಜಾಗದಲ್ಲಿ ಸ್ವಚ್ಛಗೊಳಿಸಲಾಯಿತು. ನಂತರ ಅರಣ್ಯ ಇಲಾಖೆಯ ಸಸ್ಯ ಪಾಲನಕ್ಕೆ ಭೇಟಿ ನೀಡಿ ಅಲ್ಲಿನ ಫಾರೆಸ್ಟ್ ಅಧಿಕಾರಿಗಳಾದ ಶ್ರೀಮತಿ ಶ್ವೇತ ನಾಯಕ್, ವಿದ್ಯಾರ್ಥಿಗಳಿಗೆ ಸಸ್ಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಸಿದರು. ನಂತರ ಅರಣ್ಯ ಇಲಾಖೆ ಸಿಂಗಳಿಕ ಪಾರ್ಕಿಗೆ ಭೇಟಿ ನೀಡಲಾಯಿತು. ನಂತರ ಭಟ್ಕಳದ ಎ.ಎಸ್.ಎಫ್.ಐ.ಗಳಾದ ಶ್ರೀ ಬೋರಯ್ಯ ಹಾಗೂ ಇತರ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಭೂಮಿಯ ಬಗ್ಗೆ, ಕಾಡು ಪ್ರಾಣಿ ಹಾಗೂ ಮರಗಳ ಬಗ್ಗೆ ಪಕ್ಷಿ ಹಾಗೂ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತಿಳಿಸಿಕೊಟ್ಟರು.

* ಏಪ್ರಿಲ್ 14 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಪ್ರಾಂಶುಪಾಲರಾದ ಶ್ರೀಮತಿ ಕಾಂತಿಭಟ್, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ ಮಾರ್ಗದರ್ಶನದಲ್ಲಿ ಗೈಡ್ ಕುಮಾರಿ ಅಮೃತಾ ಕಾರ್ಯಕ್ರಮ ನಿರೂಪಿಸಿದರು. ಗೈಡ್ಸ್ ವಿದ್ಯಾರ್ಥಿಗಳಾದ ಕುಮಾರಿ ಸಿಂಚನ, ಕುಮಾರಿ ನಿಧಿ ಅಂಬೇಡ್ಕರ್ ಅವರ ಜೀವನ ಸಾಧನೆಗಳ ಬಗ್ಗೆ ಪರಿಚಯ ಮಾಡಿಕೊಟ್ಟರು.




* ಏಪ್ರಿಲ್ 14 ರಂದು ಹೆಚ್.ಪಿ.ಎಸ್. ಅಘನಾಶಿನಿ ಕೆಳಗಿನ ಕೇರಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಕೋಟ ಮಂಕಿಯಲ್ಲಿ ಬೇಸಿಗೆ ಶಿಬಿರ ಆರಂಭಗೊಂಡಿತು.

* ಏಪ್ರಿಲ್ 14 ರಂದು ಹೊನ್ನಾವರದ ಮಾರ್ಥೋಮಾ ಶಾಲೆಯಲ್ಲಿ ಬೇಸಿಗೆ ಶಿಬಿರ ಮುಕ್ತಾಯ ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳ ಮುಖಾಂತರ ಶಾಲಾ ಆಡಳಿತ ಮಂಡಳಿಯವರು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿದ ಮಕ್ಕಳಿಗೆ, ರಾಜ್ಯ ಪುರಸ್ಕಾರ ಪಡೆದ ಮಕ್ಕಳಿಗೆ ಮತ್ತು ಸ್ಕೌಟ್–ಗೈಡ್ ಸೇವೆ ಸಲ್ಲಿಸಿದ ಶಿಕ್ಷಕರು ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ ವತಿಯಿಂದ ನೆನಪಿನ ಕಾಣಿಕೆ ಹಾಗೂ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಯಿತು.

* ಏಪ್ರಿಲ್ 14 ರಂದು ಭಾರತ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಜಿಲ್ಲಾ ಸಂಸ್ಥೆ ಕಾರವಾರ, ಸ್ಥಳೀಯ ಸಂಸ್ಥೆ ಹೊನ್ನಾವರ ಮತ್ತು ನ್ಯೂ ಇಂಗ್ಲಿಷ್ ಸ್ಕೂಲ್ ಹೊನ್ನಾವರ ಇವರ ಆಶ್ರಯದಲ್ಲಿ ನಡೆದ ಬೇಸಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

* ಏಪ್ರಿಲ್ 15 ರಂದು ಸ್ಥಳೀಯ ಸಂಸ್ಥೆ ಭಟ್ಕಳ ಇದರ ವತಿಯಿಂದ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಶ್ರೀರಾಜು ಮೊಗೇರ, ವ್ಯವಸ್ಥಾಪಕರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಅಳ್ವೆಕೋಡಿ, ಭಟ್ಕಳ. ಇವರು ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವೆಂಕಟೇಶ ಗುಬ್ಬಿಹಿತ್ತಲ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಕೇಶವ ಮೊಗೇರ ವಂದಿಸಿದರು. ಶ್ರೀ ರಾಜೀವಿ ಮೊಗೇರ ಕಾರ್ಯಕ್ರಮ ನಿರೂಪಿಸಿದರು.



* ಏಪ್ರಿಲ್ 16 ರಂದು ಭಟ್ಕಳದ ಅಳ್ವೆಕೋಡಿಯ ದುರ್ಗಾ ಪರಮೇಶ್ವರಿ ಪ್ರೌಢ ಶಾಲೆ ವಿದ್ಯಾರ್ಥಿಗಳು ನಿಮ್ಮ ಹಕ್ಕನ್ನು ಚಲಾಯಿಸಿ ತಪ್ಪದೇ ಮತದಾನ ಮಾಡಿ ಎಂಬ ಘೋಷ ವಾಕ್ಯದೊಂದಿಗೆ ಪಟ್ಟಣ ಪಂಚಾಯತ ಸಹಯೋಗದೊಂದಿಗೆ ಮುಂಬರುವ ವಿಧಾನಸಭಾ ಚುನಾವಣೆಗೆ ಮತ ಚಲಾಯಿಸುವಂತೆ ಜಾಥಾ ನಡೆಸಿದರು.

## ಕೊಡಗು

ಮಡಿಕೇರಿ ಎಫ್.ಎಂ.ಕೆ.ಎಂ.ಸಿ. ಕಾಲೇಜು ಸಭಾಂಗಣದಲ್ಲಿ ಪರಿಸರ ಸಂರಕ್ಷಣಾ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಈ ಮೂರು ಸಂಸ್ಥೆಯ ಜಂಟಿ ಆಶ್ರಯದಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ನೂರಾರು ವಿದ್ಯಾರ್ಥಿಗಳ ಸಹಯೋಗದಲ್ಲಿ ಪ್ರತಿಜ್ಞೆ ವಿಧಿಯನ್ನು ಶ್ರೀ ಎಂ.ಜಿ. ರಘುರಾಮ್ ಪರಿಸರ ಅಧಿಕಾರಿಯವರು ಬೋಧಿಸಿದರು. ನಂತರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಘಟಕರಾದ ಶ್ರೀ ಯು.ಸಿ. ದಮಯಂತಿ ಅವರು ಮತದಾನದ ಬಗ್ಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ. ರಾಘವ ಬಿ. ಅವರು ಸರ್ವರಿಗೂ ಸ್ವಾಗತ ಕೋರಿದರು. ನಂತರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಕೊಡಗು ಜಿಲ್ಲಾ ಆಯುಕ್ತರಾದ ಬೇಬಿ ಮ್ಯಾಥ್ಯೂ ಅವರು ಮತದಾನದ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮ ಕೊನೆಯಲ್ಲಿ ಕಾಲೇಜಿನ ಎಂ.ಎ. ಕೊಡವದ ಸಂಯೋಜಕರಾದ ಮೇಚಿರ ಶ್ರೀ ರವಿಶಂಕರ್ ವಂದಿಸಿದರು. ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಜಂಟಿ ಕಾರ್ಯದರ್ಶಿಯವರಾದ ಶ್ರೀ ಬೊಳ್ಳಜಿರ ಬಿ. ಅಯ್ಯಪ್ಪ ಹಾಗೂ



ಮಡಿಕೇರಿ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಶ್ರೀ ಅಜ್ಜಮಕ್ಕಡ ಎಂ. ವಿನುಕುಮಾರ್ ಹಾಗೂ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ವರ್ಗ ಹಾಗೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಭಾಗವಹಿಸಿದರು.

* ಮೇ 08 ರಂದು ಮಡಿಕೇರಿಯ ಪ್ರಸಿದ್ಧ ಪ್ರವಾಸಿ ತಾಣವಾದರಾಜ ಸೀಟಿನಲ್ಲಿ ಮತದಾನ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥುಯು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಆಗಿರುವ ಶ್ರೀಮತಿ ರಾಣಿ ಮಾಚಯ್ಯ, ಸಹ ಕಾರ್ಯದರ್ಶಿಗಳಾದ ಶ್ರೀ ಬೋಳ್ಳಜಿರ ಅಯ್ಯಪ್ಪ, ಜಿಲ್ಲಾ ಸಂಘಟಕರದ ಶ್ರೀಮತಿ ಯು.ಸಿ. ದಮಯಂತಿ, ಸ್ಕೌಟ್ ಮಾಸ್ಟರ್ ಶ್ರೀ ಕೆ.ಯು. ರಂಜಿತ್ ಮಡಿಕೇರಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ ಅಜ್ಜಮಾಡ ವಿನಯ್ ಕುಮಾರ್ ಭಾಗವಹಿಸಿದ್ದರು.



* ಮೇ 15 ರಂದು ಭಾರತ್ ಸ್ಕೌಟ್ಸ್–ಗೈಡ್ಸ್ ಭವನ ಮಡಿಕೇರಿಯಲ್ಲಿ ಜಿಲ್ಲಾಡಳಿತ, ಕೊಡಗು ಜಿಲ್ಲಾ ಪಂಚಾಯತ್ ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಸಮಿತಿ, ಕೊಡಗು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆಯ ಸಹಯೋಗದಿಂದ ಮೇ 15 ರಿಂದ 29ರ ವರೆಗೆ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮೇ 15 ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ವಿಸ್ಮಯ, ನಿರ್ದೇಶಕರು, ಯುವಜನ ಕ್ರೀಡಾ ಇಲಾಖೆ, ಮಡಿಕೇರಿ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಜಯಂತಿ ಪ್ರಥಮ ದರ್ಜೆ ಸಹಾಯಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಡಿಕೇರಿ ಇವರು ವಹಿಸಿದರು. ಶ್ರೀಮತಿ ವಿಸ್ಮಯ, ನಿರ್ದೇಶಕರು, ಯುವಜನ ಕ್ರೀಡಾ ಇಲಾಖೆ, ಮಡಿಕೇರಿ ಇವರು ಉದ್ಘಾಟನೆಯನ್ನು ನೇರವೇರಿಸಿ ಮಕ್ಕಳು ಇಂತಹ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ನುಡಿದರು ಹಾಗೂ ನಮ್ಮ ಇಲಾಖಾ ವತಿಯಿಂದ ಮಕ್ಕಳಿಗೆ ಉಚಿತವಾಗಿ ಈಜು ಕಲಿಯಲು ಅವಕಾಶ ಮಾಡಿಕೊಡುತ್ತೇನೆ ಎಂದು ತಿಳಿಸಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಕವಿತಾ, ಪತ್ರಾಂಕಿತ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಶ್ರೀಮತಿ ಬಿಂದು ಕೆ.ಆರ್. ವಿಷಯ ಪರಿವೀಕ್ಷಕರು ಸಾರ್ವಜನಿಕ ಶಿಕ್ಷಣಾ ಇಲಾಖೆ, ಶ್ರೀಮತಿ ಎಂ.ಎಂ. ವಸಂತಿ, ಜಿಲ್ಲಾ ಕಾರ್ಯದರ್ಶಿ ಭಾರತ್ ಸ್ಕೌಟ್ಸ್–ಗೈಡ್ಸ್ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಅಲಿಮ ಪಿ.ಎಚ್., ರಂಜಿತ್, ಕೆ.ಯು. ಕುಮಾರಸ್ವಾಮಿ ಟಿ.ಬಿ. ವಾಮನ ಟಿ.ಕೆ. ಅಲ್ಲದೇ ವಿಶೇಷವಾಗಿ ಯಕ್ಷಗಾನ ತರಬೇತಿಯನ್ನು ನೀಡಲು ಯಕ್ಷಗಾನ ಗುರು ಶ್ರೀ ಚಂದ್ರಶೇಖರ್ ಪೇರಾಜೆಯವರು ಕಾರ್ಯನಿರ್ವಹಿಸುವರು. ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಹಾಗೂ ಕುಮಾರಿ ಪೂಜಾ ಮತ್ತು ಹರೀಶ್ ಬಾಲಭವನ ಸಿಬ್ಬಂದಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಾದ ಕಾವ್ಯ ಮತ್ತು ಚೈತ್ರಾ ಹಾಜರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ವಾಮನ ಟಿ.ಕೆ. ನೇರವೇರಿಸಿದರು, ವಂದನಾರ್ಪಣೆಯನ್ನು ಸಂಪಾಜೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ಉಷಾರಾಣಿಯವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಅಲಿಮ ಇವರು ಮಾಡಿದರು. ಶಿಬಿರದಲ್ಲಿ 80 ಮಕ್ಕಳು ಭಾಗವಹಿಸಿದರು.



## ಕೋಲಾರ

ಏಪ್ರಿಲ್ 16 ರಿಂದ 19ರ ವರೆಗೆ ಶ್ರೀ ಪ್ರೀತಿ ವಿದ್ಯಾ ಮಂದಿರ, ನ್ಯಾಷನಲ್ ಪ್ರೌಢಶಾಲೆ, ವಿದ್ಯಾ ದೀಪ್ತಿ ಶಾಲೆ, ಯಲ್ದೂರು ಶ್ರೀನಿವಾಸಪುರ ತಾಲ್ಲೂಕು ಶ್ರೀಮತಿ ಗೌರಬಾಯಿರವರ ನೇತೃತ್ವದಲ್ಲಿ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಸುಮಾರು 330 ವಿದ್ಯಾರ್ಥಿಗಳು



10 ದಳ ನಾಯಕರು ಭಾಗವಹಿಸಿದ್ದರು. ರಾಜ್ಯ ತರಬೇತಿ ಆಯುಕ್ತರಾದ ಶ್ರೀಮತಿ ಕೆ.ವಿ. ಶ್ಯಾಮಲ, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕೋಲಾರ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ಎನ್. ಉಮಾದೇವಿ ಮುಂತಾದವರು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

* ಏಪ್ರಿಲ್ 19 ರಿಂದ 21ರ ವರೆಗೆ ಸರ್ಕಾರಿ ಬಾಲಕಿಯರ ಕಾಲೇಜು ಶ್ರೀನಿವಾಸಪುರ ಕೋಲಾರ ಜಿಲ್ಲೆ ಇಲ್ಲಿ 100 ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ತಾಲ್ಲೂಕು ನೋಡಲ್ ಅಧಿಕಾರಿ ಶ್ರೀ ಗಂಗಪ್ಪರವರು ಉದ್ಘಾಟಿಸಿದರು, ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪ್ರಾಣೇಶ್‌ರವರು ವಹಿಸಿದ್ದರು.



* ಏಪ್ರಿಲ್ 17 ರಿಂದ 21ರ ವರೆಗೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಗೊಲ್ಲಹಳ್ಳಿ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತೊರಲಕ್ಕಿ ಮಾಲೂರು ತಾಲ್ಲೂಕು ಇಲ್ಲಿ ದಳ ಹಂತದ ಬೇಸಿಗೆ ಶಿಬಿರವನ್ನು ಶ್ರೀಮತಿ ಭಾರತಿ ಎಸ್.ಪಿ. ಮತ್ತು ಶ್ರೀ ಕೆ.ಎಂ. ರಾಜಪ್ಪರವರ ನೇತೃತ್ವದಲ್ಲಿ ಸಂಘಟಿಸಲಾಗಿತ್ತು.

* ಏಪ್ರಿಲ್ 17 ರಿಂದ 21ರ ವರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾಸ್ತೇನಹಳ್ಳಿ ಶ್ರೀನಿವಾಸಪುರ ತಾಲ್ಲೂಕು ಇಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವಿ.ಎಂ. ನಾರಾಯಣಸ್ವಾಮಿರವರ ನೇತೃತ್ವದಲ್ಲಿ ಸುಮಾರು 60 ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಸಂಘಟಿಸಲಾಗಿತ್ತು.

* ಏಪ್ರಿಲ್ 17 ರಿಂದ 21ರ ವರೆಗೆ ಶ್ರೀ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಮತ್ತು ಶಿಕ್ಷಣ ಸಂಸ್ಥೆ ಸಂಸ್ಥಾಪಕರಾದ ಡಾ. ಎಂ. ಚಂದ್ರಶೇಖರ್‌ರವರ ನೇತೃತ್ವದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು.

* ಏಪ್ರಿಲ್ 25 ರಿಂದ 27ರ ವರೆಗೆ ನಗರದ ಹೊರವಲಯದ ಗುಪ್ತಾಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಸ್ಕೌಟ್ಸ್-ಗೈಡ್ಸ್ ಬೇಸಿಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರಾದ ಜಾಯ್ ಜಯಶ್ರೀ ರಾಜ್, ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಂಟಿ ಕಾರ್ಯದರ್ಶಿ ಶ್ರೀಮತಿ ಉಮಾದೇವಿ ಮುಂತಾದವರು ಉಪಸ್ಥಿತರಿದ್ದರು.

* ಏಪ್ರಿಲ್ 26 ರಿಂದ 28ರ ವರೆಗೆ ಜೈನ್ ಗ್ಲೋಬಲ್ ಅಂತಾರಾಷ್ಟ್ರೀಯ ಶಾಲೆ ಬಂಗಾರಪೇಟೆ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು.

* ಮೇ 04 ರಿಂದ 06ರ ವರೆಗೆ ಶ್ರೀನಿವಾಸಪುರ ವಿಜನ್ ಇಂಡಿಯಾ ಪಬ್ಲಿಕ್ ಶಾಲೆ, ರೊಣೂರು ಕ್ರಾಸ್ ಶ್ರೀನಿವಾಸಪುರ ಇಲ್ಲಿ ಬೇಸಿಗೆ ಶಿಬಿರವನ್ನು ಸಂಘಟಿಸಲಾಗಿತ್ತು. ರಾಜ್ಯ ತರಬೇತಿ ಆಯುಕ್ತರಾದ ಶ್ರೀಮತಿ ಕೆ.ವಿ. ಶ್ಯಾಮಲ, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ., ಕೋಲಾರ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಎನ್. ಉಮಾದೇವಿ, ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಗೌರಬಾಯಿ ಮುಂತಾದವರು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



* ಮೇ 10 ರಂದು ಕರ್ನಾಟಕ ವಿಧಾನಸಭೆ ಚುನಾವಣೆ ಪ್ರಯುಕ್ತ ಕೋಲಾರ ಜಿಲ್ಲೆಯ ವಿವಿಧ ಮತದಾನ ಕೇಂದ್ರಗಳಲ್ಲಿ ಸ್ಕೌಟ್ಸ್, ರೋವರ್ಸ್-ರೇಂಜರ್ಸ್, ಮತ್ತು ದಳ ನಾಯಕರು ಕಾರ್ಯಕ್ರಮಗಳು ಸಂಘಟಿಸಲಾಗಿತ್ತು.

## ಅಭಿನಂದನೆಗಳು



ಯೋಗ ಸರ್ಟಿಫೀಕೇಟ್ ಬೋರ್ಡ್ (YCB) ನವದೆಹಲಿ ಮತ್ತು ಆಯುಷ್ ಇಲಾಖೆಯ ಸಹಯೋಗದಲ್ಲಿ ರಾಷ್ಟ್ರಮಟ್ಟದಲ್ಲಿ ನಡೆದ ಯೋಗ ಪ್ರೋಟೊಕಾಲ್ (Instructor) ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯದಿಂದ ಕೊಡಗು ಜಿಲ್ಲೆಯ **ಶ್ರೀಮತಿ ಪಿ.ಹೆಚ್. ಅಲಿಮ**, ಎ.ಎಲ್.ಟಿ. (ಗೈ) ಇವರು ಉತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಿರುತ್ತಾರೆ. ಇವರಿಗೆ ಭಾರತ್ ಸ್ಕೌಟ್ ಮತ್ತು ಗೈಡ್ಸ್, ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು

– ರಾಜ್ಯ ಕಾರ್ಯದರ್ಶಿ

## ಮೈಸೂರು

ಜಿಲ್ಲಾ ಸಂಸ್ಥೆಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು, ಶ್ರೀ ಟಿ.ಎ. ರವಿಶಂಕರ್, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯರ್ಶಿಗಳು ಹಾಗೂ ಜಿಲ್ಲಾ ಸಂಘಟಕರುಗಳಾದ ಶ್ರೀ ರಾಮಪ್ರಸಾದ್ ಹಾಗೂ ಶ್ರೀ ಆರ್. ಪಿ. ಚಂದ್ರು ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್-ರೇಂಜರ್ ಮಕ್ಕಳು ಭಾಗವಹಿಸಿದ್ದರು.



* ನಂಜನಗೂಡು ಸ್ಥಳೀಯ ಸಂಸ್ಥೆ ವತಿಯಿಂದ ಬೇಸಿಗೆ ಶಿಬಿರವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆರೆ ಹುಂಡಿಯಲ್ಲಿ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಸರ್ಕಾರ ಹಿರಿಯ ಪ್ರಾಥಣಿಕ ಶಾಲೆ ಕೆರೆ ಹುಂಡಿ, ಚಾಮಲಾಪುರ ಹುಂಡಿ, ಕನಕದಾಸ ಶಾಲೆಯ ಮಕ್ಕಳು ಭಾಗವಹಿಸಿದ್ದಾರೆ.

* ಮತದಾನ ಜಾಗೃತಿ ಜಾಥ ಮೇ 06 ರಂದು ಮೈಸೂರಿನ ಜೆ.ಎಸ್.ಎಸ್. ಮಹಿಳಾ ಕಾಲೇಜಿನಲ್ಲಿ ಮತದಾನ ಜಾಗೃತಿ ಜಾಥವನ್ನು ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಪೂರ್ಣಿಮಾ ಜಾಥಾಗೆ ಚಾಲನೆ ನೀಡಿದರು. ಈ ಸಂರ್ಭದಲ್ಲಿ ಕಾಲೇಜಿನ ಡೀನ್ ಡಾ. ರೇವಣ್ಣ, ಲೀಡರ್ ಶ್ರೀಮತಿ ಅನುಷಾ, ಜಿಲ್ಲಾ ಸಂಘಟಕರಾದ ಶ್ರೀ ರಾಮಪ್ರಸಾದ್ ಉಪಸ್ಥಿತರಿದ್ದರು.

## ರಾಮನಗರ

“ಸ್ವಾತಂತ್ರ್ಯ ಪೂರ್ವದಿಂದಲೂ ದೇಶ ಕಟ್ಟುವಲ್ಲಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ದೇಶದ ಕೆಲವೇ ಸಂಸ್ಥೆಗಳ ಪೈಕಿ ಒಂದಾಗಿದೆ” ಎಂದು ಸಂಸ್ಥೆಯ ರೋವರ್ಸ್ ಹಾಗೂ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ಪ್ರಭು ಉಪಾಸೆ ತಿಳಿಸಿದರು. ಅವರು ಮಂಗಳವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕಾಲ ಹಮ್ಮಿಕೊಂಡಿದ್ದ, ರೋವರ್ಸ್ ಮತ್ತು ರೇಂಜರ್ಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ವಿ. ವೆಂಕಟೇಶ್ ಮಾತನಾಡಿ, “ನಮ್ಮ ಕಾಲೇಜಿನಲ್ಲಿ ಮೂರೂವರೆ ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಓದು, ಕ್ರೀಡೆ ಸೇರಿದಂತೆ ವಿವಿಧ



ವಿಭಾಗಗಳಲ್ಲಿ ರಾಜ್ಯ, ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಎನ್.ಸಿ.ಸಿ. ತಂಡವೂ ಸಹ ಬರಲಿದ್ದು, ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಲು ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಯುತ್ತಿರುವುದು ತಾಲ್ಲೂಕಿನ ಹೆಮ್ಮೆಯ ಸಂಗತಿಯಾಗಿದೆ” ಎಂದು ಅಭಿಪ್ರಾಯ ಪಟ್ಟರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಾಮಾಜಿಕ ಹೋರಾಟಗಾರ ಶ್ರೀ ಗೋ.ರಾ. ಶ್ರೀನಿವಾಸ ಮಾತನಾಡಿ, “ನಾಲ್ಕು ಗೋಡೆಗಳ ಮಧ್ಯದಲ್ಲಿ ಕಲಿಯುವುದಷ್ಟೇ ಶಿಕ್ಷಣವಲ್ಲಾ, ಎಲ್ಲಾ ರೀತಿಯ ಜನರ ನಡುವೆ ಬೆರೆತು ಕಲಿಯುವ ಸಾಮಾನ್ಯ ಜ್ಞಾನ ಬಹಳ ಮುಖ್ಯವಾದುದಾಗಿದೆ. ಪ್ರತಿ ವಿದ್ಯಾರ್ಥಿಗಳು ಪಂಚಭೂತಗಳ ಪಾತ್ರವನ್ನು ಅರಿತು, ಪರಿಸರಕ್ಕೆ ಒತ್ತು ನೀಡುವ ಮೂಲಕ ಸ್ಕೌಟ್ಸ್ ಆಂಡ್ ಗೈಡ್ಸ್‌ನ ಮುಖ್ಯ ಉದ್ದೇಶವನ್ನು ಈಡೇರಿಸಬೇಕು” ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದ ರೂವಾರಿಗಳು, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ರೇಂಜರ್ಸ್‌ನ ಮುಖ್ಯಸ್ಥರಾದ ಡಾ. ಚನ್ನಮ್ಮ, ದೈಹಿಕ ಶಿಕ್ಷಣ ನಿರ್ದೇಶಕರಾದ ನಂಜುಂಡ ಆರ್.ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ರಾಮನಗರ ಜಿಲ್ಲೆಯ ಚನ್ನಪಟ್ಟಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣರವರ ವತಿಯಿಂದ ಏಪ್ರಿಲ್ 26 ರಂದು ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಶ್ರೀ ಪ್ರಭು, ರೇಂಜರ್ ಲೀಡರ್ ಶ್ರೀಮತಿ ಚನ್ನಮ್ಮರವರ ನೇತೃತ್ವದಲ್ಲಿ ಮೊದಲಿಗೆ ಬೆಳಿಗ್ಗೆ ಧ್ವಜಾರೋಹಣ ನೆರವೇರಿಸಿದರು. ಮಾನವೀಯ ಮೌಲ್ಯಗಳನ್ನು ಮತ್ತು ಶಿಸ್ತು ಹಾಗೂ ನಾಯಕತ್ವ ಗುಣ ಬೆಳೆಸಲು ಸ್ಕೌಟ್ಸ್ ಮತ್ತು ಗೈಡ್ಸ್ ತುಂಬಾ ಯಶಸ್ವಿಯಾಗಿ ಚಟುವಟಿಕೆಗಳನ್ನು ಕೈಗೊಂಡಿದೆ. ಎಂದು ಕಾಲೇಜಿನ ಪ್ರಾಧ್ಯಾಪಕರು ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳಿಗೆ ಶುಭಾಶಯಗಳು ತಿಳಿಸಿದರು.



* ರಾಮನಗರ ಜಿಲ್ಲೆಯ ಜ್ಞಾನ ವಾಹಿನಿ ಪ್ರಾಥಮಿಕ ಶಾಲಾ ಬಿಡದಿ ಶಾಲೆಯ ದಳದ ಮಟ್ಟದಲ್ಲಿ ಏಪ್ರಿಲ್ 10 ರಿಂದ 29ರ ವರಗೆ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಪಾರ್ವತಮ್ಮ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸದರಿ ಶಾಲೆಯಲ್ಲಿ ಸ್ಕೌಟ್ಸ್ ಮಾಸ್ಟರ್ ಶ್ರೀ ಕೋಟ್ರೇಶಪ್ಪ, ಶ್ರೀ ಕಾಂತಪ್ಪ, ಕಬ್ ಮಾಸ್ಟರ್ ಶ್ರೀ ನಾಗಪ್ಪ, ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಲಕ್ಷ್ಮೀದೇವಮ್ಮ, ಶ್ರೀಮತಿ ಶಿವಮಾದಮ್ಮ ಹಾಗೂ ಫ್ಲಾಕ್ ಲೀಡರ್ ಶ್ರೀಮತಿ ಶಾಂತಲಾದೇವಿರವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿದೆ. ಏಪ್ರಿಲ್ 29 ರಂದು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಶಿಬಿರ ಮುಕ್ತಾಯ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಸಂದರ್ಭದಲ್ಲಿ ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಂದ ಸಾಹಸಮಯ ನೃತ್ಯ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿತ್ತು.



* ರಾಮನಗರ ಜಿಲ್ಲೆಯ ಚನ್ನಪಟ್ಟಣ ಸ್ಥಳೀಯ ಸಂಸ್ಥೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎಲೆಕೆರೆ ಶಾಲೆ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಜೀವಿತಾ ಬಿ.ರವರು ತಮ್ಮ ಗೈಡ್ಸ್ ವಿದ್ಯಾರ್ಥಿಗಳಿಗೆ ದಳದ ಮಟ್ಟದಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಏಪ್ರಿಲ್ 26 ರಿಂದ 27 ರಂದು ಹಮ್ಮಿಕೊಂಡಿದ್ದರು.

## ತುಮಕೂರು

ಶ್ರೀ ಶಿವಕುಮಾರ ಸ್ವಾಮೀಜಿಯವರ 116ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಸ್ಕೌಟ್-ಗೈಡ್ಸ್, ರೋವರ್ಸ್-ರೇಂಜರ್ಸ್ ಸೇವೆ ಸಲ್ಲಿಸಿದರು.



* ತುಮಕೂರು ಜಿಲ್ಲಾ ಸಂಸ್ಥೆ ವತಿಯಿಂದ ಏಪ್ರಿಲ್ ತಿಂಗಳಲ್ಲಿ ಬೇಸಿಗೆ ಶಿಬಿರಗಳನ್ನು ಜಿಲ್ಲಾದ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಸುಮಾರು



2000 ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಈ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದರು.

* ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ದಳ ನಾಯಕರಗಳು ಮತದಾನ ಕೇಂದ್ರಗಳಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು.

## ಉಡುಪಿ

ಏಪ್ರಿಲ್ 27 ರಿಂದ 29ರ ವರೆಗೆ ಕ್ರೈಸ್ಟ್ ಮಣಿಪಾಲ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಬ್-ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಕಬ್ 34, ಬುಲ್‌ಬುಲ್ 23, ಸ್ಕೌಟ್ 51, ಗೈಡ್ 48, ಶಿಕ್ಷಕರು ಇವರಿಗೆ ಬೇಸಿಗೆ ಶಿಬಿರದ ನಡೆಸಿದರು.



* ಮಾರ್ಚ್ 27 ರಿಂದ ಸೈಂಟ್ ಮೇರಿಸ್ ಕನ್ನಡಪಾಡಿ ಇಲ್ಲಿ ಕಬ್‌ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ನಡೆಸಲಾಯಿತು.

* ಏಪ್ರಿಲ್ 31 ರಂದು ದಂಡತೀರ್ಥ ಆಂಗ್ಲ ಮಾಧ್ಯಮ ಕಾಪು ಶಾಲೆಯಲ್ಲಿ ಕಬ್-ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರದ ಕಾರ್ಯಕ್ರಮವನ್ನು ಶ್ರೀ ಆನಂದ ಅಡಿಗ ಅವರು ಉದ್ಘಾಟಿಸಿದರು. ಶಾಲಾ ಸಂಚಾಲಕರು ಹಾಗೂ ಸ್ಥಳೀಯ ಸಂಸ್ಥೆ ಗೌರವಾಧ್ಯಕ್ಷರಾಗಿರುವ ಡಾ॥ ಕೆ. ಪ್ರಶಾಂತ್ ಉಪಸ್ಥಿತರಿದ್ದರು.



## ವಿಜಯಪುರ



ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮೀತಿ ವಿಜಯಪುರ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ವಿಜಯಪುರ ವತಿಯಿಂದ ಕರ್ನಾಟಕ ವಿಧಾನಸಭೆ ಚುನಾವಣೆ ನಿಮಿತ್ತ ಮತದಾನ ಜಾಗೃತಿ ಅಭಿಯಾನ ಸೈಕಲ್ ಜಾಥಾ–2023 ಕಾರ್ಯಕ್ರಮವನ್ನು ಮೇ 02 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾ ಸ್ವೀಪ್ ಸಮಿತಿಯ ಮುಖ್ಯಸ್ಥರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ರಾಹುಲ್ ಸಿಂಧೆರವರು ಉದ್ಘಾಟಿಸಿದರು.



# ಹಾಲು ಅಮೃತ



– ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ
ಮಕ್ಕಳ ಹೃದಯ ತಜ್ಞರು, ಬೆಂಗಳೂರು

ಮಗು ಹುಟ್ಟುತ್ತಿದ್ದಂತೆ ಬರುವ ಮೊದಲ ತಾಯಿಯ ಹಾಲು (ಗಿಣ್ಣಿನ ಹಾಲು) ನವಜಾತ ಮಗುವಿನ ಕರುಳಿನಲ್ಲಿ ರೋಗನಿರೋಧಕ ಪ್ರತಿಕಾಯ (Antibodies) ಉತ್ಪತ್ತಿಯಾಗಿಸಿ ಮಗುವು ದಷ್ಟಪುಷ್ಟವಾಗಿ ಬೆಳೆಯಲು ಸಹಕರಿಸುತ್ತದೆ. ಈ ಹಾಲು ಸಂಪೂರ್ಣ ಆಹಾರವಾಗಿ ಮಗುವಿನ ಪೋಷಣೆ ಮಾಡುತ್ತದೆ. ಮಗು ದೊಡ್ಡದಾದ ನಂತರ ವಯಸ್ಸಾಗುವ ತನಕ ಹಸುವಿನ ಹಾಲು ಆರೋಗ್ಯಕ್ಕೆ ಉತ್ತಮ. ಸಾಧಾರಣವಾಗಿ ಎಲ್ಲರೂ ಎಮ್ಮೆ ಹಾಲು, ಹಸುವಿನ ಹಾಲು ಬಳಸುತ್ತಾರೆ. ಎಮ್ಮೆ ಹಾಲು ಗಟ್ಟಿಯಾಗಿ ಹೆಚ್ಚು ಜಿಡ್ಡು, ಪ್ರೊಟೀನ್, ಲ್ಯಾಕ್ಟೋಸ್ ಮತ್ತು ಲವಣಯುಕ್ತವಾಗಿರುತ್ತದೆ. ಆದರೆ, ಹಸುವಿನ ಹಾಲು ತಾಯಿಯ ಹಾಲಿನವಂತಿರುವುದರಿಂದ ಮಕ್ಕಳಿಗೆ ಹಸುವಿನ ಹಾಲನ್ನು ಕೊಡುತ್ತೇವೆ. ಆದರೆ ಪ್ರಶ್ನೆ ಬರುವುದು ದೇಶಿ ತಳಿಯ ಹಾಲು ಉತ್ತಮವೇ? ಟೈಪ್–ಎ ಅಥವಾ ಟೈಪ್–ಎ–2. ವೈಜ್ಞಾನಿಕವಾಗಿ ನಮ್ಮ ಭಾರತದ ದೇಶಿ ತಳಿಯ ಹಸುಗಳ ಟೈಪ್–ಎ–2 ಹಾಲು ಉತ್ಕೃಷ್ಟವಾಗಿದೆ. ಆದರೆ, ವಿದೇಶಿ ಜರ್ಸಿ ತಳಿಯ ಹಾಲು ಟೈಪ್–ಎ ಆರೋಗ್ಯಕಾರಕವಲ್ಲ. ಹಳೆ ಮೈಸೂರು ರಾಜ್ಯದಲ್ಲಿ ಪ್ರಚಲಿತವಾದ ಅಮೃತ ಮಹಲ್ ಹಸುವಿನ ಹಾಲು ಅತ್ಯಂತ ಉತ್ಕಷ್ಟವಾಗಿದೆ. ಆದರೆ, ದುರಂತವೆಂದರೆ ಹೆಚ್ಚು ಹಾಲು ಕೊಡುವ ಜರ್ಸಿ ಹಸುವನ್ನು ರೈತರು ಸಾಕಿ ನಮ್ಮ ದೇಶಿ ತಳಿಯ ಹಸುಗಳನ್ನು ಕಸಾಯಿ ಖಾನೆಗೆ ಕೊಡುವ ಮಹಾಪರಾದ ಮಾಡಿದ್ದಾರೆ. ಇಂದು ವೈಜ್ಞಾನಿಕವಾಗಿ ತಿಳಿದು ಬಂದಿದ್ದೇನೆಂದರೆ, ವಿದೇಶಿ ತಳಿಯ ಹಸುವಿನ ಹಾಲನ್ನು ಟೈಪ್–ಎ–1, ಅಂತ ಕರೆಯುತ್ತಾರೆ. ಇದು ಆರೋಗ್ಯಕ್ಕೆ ಹಾನಿಕಾರಕ, ಜೀರ್ಣ ಮಾಡಿಕೊಳ್ಳಲು ಕಷ್ಟ. ಇದರಿಂದ ಕರುಳು ಬೇನೆ, ಸಕ್ಕರೆ ಖಾಯಿಲೆ ಬರಬಹುದೆಂದು ತಿಳಿದು ಬಂದಿದೆ. ಆದರೆ ನಮ್ಮ ದೇಶಿ ತಳಿಯ ಹಸುಗಳ ಎ–2 ಹಾಲು ಜೀರ್ಣಕ್ಕೆ ಸುಲಭ. ತಾಯಿಯ ಹಾಲಿನಂತೆ ಆರೋಗ್ಯಕ್ಕೆ ಉತ್ತಮ. ವಿದೇಶಿ ತಳಿಯ ಹಸುವಿನ ಹಾಲಿನ ಎ–1, ಹಾಲಿನಲ್ಲಿ ಜಿಡ್ಡು ಕಡಿಮೆ, ಇಳುವರಿ ಹೆಚ್ಚು. ಆದರೆ ಹಾನಿಕಾರಕ. ನಮ್ಮ ದೇಶದ ಹಸು ಅದರಲ್ಲೂ ಎಮ್ಮೆ ಹಾಲು ಎ–2ನಲ್ಲಿ Calcium, Phosphourus, Potassium, Nagnelam, Zinc And Iron ಇರುತ್ತದೆ. ಬನ್ನಿ ನಮ್ಮ ದೇಶಿ ಹಸು, ಎಮ್ಮೆ ಹಾಲು ಬಳಸೋಣ, ನಮ್ಮ ಆರೋಗ್ಯ ವೃದ್ಧಿಸೋಣ.

# ಅಂತರ್ ರಾಷ್ಟ್ರೀಯ ಸ್ಕೌಟ್ಸ್-ಗೈಡ್ಸ್ ಸಾಂಸ್ಕೃತಿಕ ಜಾಂಬೂರಿ

# ಯಜ್ಞ-ಮಹಾಯಜ್ಞ

ಪುರಾಣಗಳಲ್ಲಿ ಒಂದು ಯಜ್ಞ... ।
ಆಗಿನ ರಾಜ ಮಹಾರಾಜರು ತಮ್ಮ ಸಂಸ್ಥಾನಗಳಲ್ಲಿ ಮಾಡುತ್ತಿದ್ದರು ಯಜ್ಞ
ವಿವಿಧ ರಾಜ್ಯಗಳಿಂದ, ಅಕ್ಕಪಕ್ಕದ ದೇಶ-ದೇಶಗಳಿಂದ
ಧಾವಿಸುತ್ತಿದ್ದರು - ರಾಜರು, ಪ್ರಜೆಗಳು, ದಂಡು-ದಳಗಳು !
ಪುರೋಹಿತರು, ಋತ್ವಿಕರು ನಾನಾ ಗುಂಪುಗಳು ।
ಲೋಕ ಕಲ್ಯಾಣಕ್ಕಾಗಿ, ಸ್ನೇಹ-ಸೌಹಾರ್ದಕ್ಕಾಗಿ ಮಾಡುವ ಯಜ್ಞದ
ವೈಭವವೋ ವೈಭವ !!
ಆಟಪಾಟಗಳೇನು, ಊಟ ಉಪಚಾರಗಳೇನು
ಗೌರವ ಕಾಣಿಕೆಗಳೇನು ?
ಸಂಭ್ರಮವೋ ಸಂಭ್ರಮ !!
ದೇವತೆಗಳೂ ಅನುಗ್ರಹಿಸುತ್ತಿದ್ದರು...
ಒಂದೊಂದು 'ಯಜ್ಞ'ದ ಸಡಗರವೂ ನಭೂತೋ ನ ಭವಿಷ್ಯತಿ !

ಆದರೆ ಇಲ್ಲಿ ನಡೆದುದೊಂದು 'ಮಹಾಯಜ್ಞ' !
ಅದೇ ದಕ್ಷಿಣ ಕನ್ನಡದ ಮೂಡುಬಿದಿರೆಯಲ್ಲಿ
ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ !
ಅನೇತ ತಿಂಗಳಿಂದ ನಡೆದಿದ್ದೇ ನಡೆದುದು ತಯಾರಿ...
ಕ್ಷೇತ್ರ ವೀಕ್ಷಣೆಯೇನು... ಜೂಮ್ ಮೀಟಿಂಗ್‌ಗಳೇನು ?
ಒಂದೇ ಎರಡೇ...
ಎಲ್ಲೂ ಲೋಪ-ದೋಷಗಳಾಗದ ಅಚ್ಚುಕಟ್ಟು ತನದ ಮುಂದಾಲೋಚನೆ !
ಘನ ಅಧ್ವರ್ಯ ಅನುಪಮ ಸಿಂಧಿಯಾಜಿ ಮತ್ತು
ಅನನ್ಯ ಆಳ್ವಜಿ ರಿಂದ !
ಉತ್ಸುಕ ಸಿಬ್ಬಂದಿಗಳ ಸಹಕಾರದಲ್ಲಿ ಎರಡು ಮಾತಿಲ್ಲ !
ಎಲ್ಲರ ಆಗಮನ ವಾರಕ್ಕೆ ಮೊದಲಿಂದ
ಚಾಚಿದರು ಜಿಲ್ಲೆ ಜಿಲ್ಲೆಗಳಿಂದ ಸಹಕಾರ
ಸೌಹಾರ್ದ ಔದಾರ್ಯಗಳ ಹಸ್ತ !

ಕಾಫಿ-ಸಕ್ಕರೆ, ಅಕ್ಕಿ-ಬೇಳೆ, ಬೆಲ್ಲ-ಹಾಲು ತುಪ್ಪ
ತೆಂಗಿನ ಕಾಯಿ ತರಕಾರಿಗಳೇನು
ಒಂದೇ ಎರಡೇ ರಾಶಿ-ರಾಶಿ ರೊಟ್ಟಿಗಳೂ ಕೂಡ...
ಊಟಕ್ಕೆ ಒಬ್ಬಟ್ಟುಗಳು ಉಪಹಾರಕ್ಕೆ ನಾಲ್ಕಾರು ವಿಧದ ತಿಂಡಿಗಳು !
ಎಲ್ಲವೂ ಅತ್ಯಂತ ಒಪ್ಪ !!
ನೆನಪಾದರೆ ಬಾಯಲ್ಲಿ ನೀರು, ಮತ್ತೆ ಮತ್ತೆ ಮೆಲುಕು
ಕಲಾ, ವಿಜ್ಞಾನ ಮಳಿಗೆಗಳೇನು, ಕ್ರೀಡೆಗಳೇನು
ಉತ್ಸವಗಳ ವೈಭವಗಳೇನು?
ಅಬ್ಬಬ್ಬಾ ! ಎರಡು ಕಣ್ಣುಗಳು ಸಾಲದಮ್ಮಾ ಸಾಲದು !
ದೇವರು ಮೈ ತುಂಬಾ ಕಣ್ಣುಗಳನ್ನು ಕೊಡಬಾರದೇ ?

ಎಲ್ಲ ಜಿಲ್ಲೆಗಳ ಸಾಂಸ್ಕೃತಿಕ ಪ್ರದರ್ಶನ...
ಸ್ಕೌಟು-ಗೈಡುಗಳೇನು, ರೋವರ್ಸ್-ರೇಂಜರ್ಸ್ ಯಾರೂ
ಕಮ್ಮಿಯಿಲ್ಲ
ಇವರ ತಯಾರು ಮಾಡಿ ತಂದ ಶಿಕ್ಷಕ ವೃಂದಕ್ಕೆ ಸರಿಸಾಟಿಯಿಲ್ಲ !
ಜಾಂಬೂರಿ ಆರಂಭದ ಸಡಗರ ಅಂತ್ಯದವರೆಗೂ
ಇತ್ತೆಂಬುದರಲ್ಲಿ ಸುಳ್ಳಿಲ್ಲ !
ಸ್ನೇಹ-ಸೌಹಾರ್ದತೆಯ, ಖುಷಿ-ಖುಷಿಯ ವಾತಾವರಣ
ಮರೆಸಿತು
ತಂದ-ತಾಯಿಗಳ ನೆನಪನೂ ಕ್ಷಣ ಕಾಲ !

ಶಿಸ್ತೇನು - ಸ್ವಚ್ಛತೆಯೇನು !
ಆರೋಗ್ಯವೇ ಭಾಗ್ಯ ಅನ್ನುತ್ತಾರೆ ನೇತಾರರು
ಈ ಅದ್ಭುತ ಏರ್ಪಾಡುಗಳ ವೀಕ್ಷಕ-ಪೋಷಕರ
ಬೆರಳುಗಳು ಮೂಗಿನ ಮೇಲೆ !
ನ ಭೂತೋ ನ ಭವಿಷ್ಯತ್ ಎಂಬ ಜಾಂಬೂರಿ ಇದು
ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ !
ಕಣ್ಣು ಮುಚ್ಚಿದರೆ ಕಣ್ಣು ಬಿಟ್ಟರೆ ಅದೇ ಗುಂಗು
ನೆನಪಾದರೆ ಕಿಲ ಕಿಲ ನಗು !
ಮುಖವಾಣಿಯಾಯ್ತು ಆಕಾಶವಾಣಿ
ಪ್ರತ್ಯಕ್ಷ ದರ್ಶಿ ದೂರದರ್ಶನ
ವಾಟ್ಸಾಪ್, ಫೇಸ್‌ಬುಕ್, ಯುಟ್ಯೂಬ್
ಯಾವುದೂ ಕಡಿಮೆಯಿಲ್ಲ - ಮಾಹಿತಿಯಲ್ಲಿ !
ಮತ್ತೊಮ್ಮೆ ನಡೆಯಲಿ ಇಂಥದೊಂದು ಸ್ಕೌಟ್-ಗೈಡ್ ಮಹಾಯಜ್ಞ
ಎಂದಿತು ವೃತ್ತ ಪತ್ರಿಕೆಗಳು !
ನೇತಾರರಿಗೆ ಸಿಬ್ಬಂದಿಗೆ ನಮೋ ನಮಃ
ಅಭಿಮಾನಿ ದೇವತೆಗಳಿಂದ ಸಲ್ಲುತಿವೆ
ಮೂಲೆ ಮೂಲೆಗಳಿಂದ ಕೋಟಿಕೋಟಿ ನಮನಗಳು
ಅಭಿನಂದನೆಗಳು, ಹೃದಯಪೂರ್ವಕವಾಗಿ !
ಇದೆಲ್ಲ ನಿಮ್ಮ ಮಾತುಗಳನ್ನು ಕೇಳಿ
ನಿಮ್ಮೆಲ್ಲರ ಕಣ್ಣುಗಳಿಂದ ನೋಡಿ ಬರೆದುದು
"ಈ ಗ-ಪದ್ಯ ನಿಮಗೇ ಅರ್ಪಣೆ"
ಏಕೆಂದರೆ ನಾನು ಈ ಮಹಾಯಜ್ಞಕ್ಕೆ ಬರಲಾಗಲಿಲ್ಲವಲ್ಲ !!

**ಜಯಶ್ರೀ ಕೆ.ಆರ್.,** ಜಿಲ್ಲಾ ಗೈಡ್ ಆಯುಕ್ತರು,
ಭಾರತ್ ಸ್ಕೌಟ್ ಮತ್ತು ಗೈಡ್ಸ್, ಕೋಲಾರ ಜಿಲ್ಲೆ,
ಕೋಲಾರ-563 101. ಮೊಬೈಲ್: 80735 50288

## ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು


ಬೀದರ್



ಬೆಂಗಳೂರು ಉತ್ತರ


ಬೆಂಗಳೂರು ಗ್ರಾಮಾಂತರ


ಚಿಕ್ಕಮಗಳೂರು


ದಕ್ಷಿಣ ಕನ್ನಡ


ಕಲಬುರಗಿ


ಕೋಲಾರ



ರಾಮನಗರ

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26